Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩ಲ | ತಾರೀಕು ೩೧-೩-೧೯೪೦ನೇ ಶುಕ್ರವಾರ | ಸಂಚಿಕೆ ೪೪

ವಾರ್ತೆಗಳು.

ಬ್ರಿಟಿಷ್ ರಾಜಕುಮಾರಿ ಎಲಿಜಬೆತ್ ತಿರಿಗಿ ಬಹುರಿಯೆಂದು ಕೇಳಿಬರುತ್ತದೆ. ಆಕೆಳ ಪ್ರಥನು ಮಗ ಚಾರ್ಲ್ಸನಿಗೆ ಈಗವ್ರಾಯು ೧೧ ವರ್ಷ ೪ ತಿಂಗಳು

ಬ್ರಿಟನಿನ ೧೯೪೦-೪೧ ರ ರಕ್ಷಣಾ ಬಜೆಟ್ಟಿನಲ್ಲಿ ೭೮೦,೮೨೦,೦೦೦ ಪವನು ಪರಮಾಣು ಸಂಶೋಧನೆಯು ಕಾರ್ಯ ಭಾರ ಹೊತ್ತ ಪೂರೈಕೆ ಮಂತ್ರಿಮಂಡಲಕ್ಕೆ ಹೋಗುವುದು.

ಮುಂಬಯಿ ಸರಕಾರ ಪ್ರಚುರ ಪಡಿಸಿದಂತೆ ಮುಂಬಯಿ ಪ್ರಾಂತ್ಯದಲ್ಲಿರುವ ಒಟ್ಟು ಭಿಕ್ಷುಕರ ಸಂಖ್ಯೆ ೪೩,೦೦೦.

ಮಕ್ಕಳ ಪಾಲನೆ ಪೋಷಣೆಯ ಕುರಿತು ತರಬೇತಿ ಕೊಡುವ ಕೇಂದ್ರವೊಂದು ಕಲ್ಕತ್ತದಲ್ಲಿ ಸದ್ಯದಲ್ಲೇ ತೆರೆಯಲ್ಪಡುವುದು.

ಆಲ್ ಇಂಡಿಯಾ ಸ್ಪಿನ್ನರ್ಸ್ ಅಸೋಸಿಯೇಶನ್ ಆಶ್ರಯದಲ್ಲಿ ಅಖಿಲಭಾರತ ನೂಲುವ ಸ್ಪರ್ಧೆಗಳು ಏಪ್ರಿಲ್ ೬ ರಿಂದ ೧೩ ರ ತನಕ ಅಂಗುಲ್ (ಒರಿಸ್ಸಾ)ದಲ್ಲಿ ಜರಗುವ ಸರ್ವೋದಯ ಪರಿಷತ್ತಿನ ಕಾಲದಲ್ಲಿ ಜರಗುವುದು

ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್ ಕಾರ್ಪೊರೇಶನ್‌ದವರು ಪರಮಾಣು ಶಕ್ತಿಯಿಂದ ನಡೆಯುವ ಒಂದು ಜಲಾಂತರ್ಗಾಮಿಯನ್ನು ತಯಾರಿಸುತ್ತಿದ್ದಾರೆ. ಯಾವದೇ ರೀತಿಯ ಪೆಟ್ರೋಲ್ ಇಲ್ಲವೇ ಎಣ್ಣೆ ತುಂಬಿಸದೆ ದೀರ್ಘ ಕಾಲ ಇದು ಚಲಿಸಬಲ್ಲದಂತೆ.

ತಗಲಿದ ಮಾತ್ರಕ್ಕೆ ಮರಣವನ್ನೇ ತರುವ ಅತ್ಯಂತ ಪ್ರಳಯಕಾರೀ 'ಮೃತ್ಯು ಕಿರಣ' ಎಂಬ ಅಸ್ತ್ರವನ್ನು ರಷ್ಯವು ತಯಾರಿಸತೊಡಗಿದೆಯೆಂದೂ, ರಷ್ಯದ ಒಂದು ಪರಮಾಣು ಕಾರ್ಖಾನೆಯಿಂದ ತಪ್ಪಿಸಿಕೊಂಡು ಬಂದ ಅಮೇರಿನಿಯನೊಬ್ಬನು ಲಂಡನಿನಲ್ಲಿ ವ್ಯಕ್ತಪಡಿಸಿದ್ದಾನೆ.

ವಾಷಿಂಗ್ಟನ್ ಮೃಗಾಲಯಕ್ಕೆ ಭಾರತದ ಪ್ರಧಾನ ಪಂಡಿತ ಜವಾಹರಲಾಲ ನೆಹರುರವರು ಉಡುಗೊರೆಯಾಗಿ ಕಳಿಸಲಿರುವ ಎರಡು ಮರಿಯಾನೆಗಳನ್ನು ಪುಕ್ಕಟ್ಟವಾಗಿ ಮುಂಬಾಯಿಯಿಂದ ನ್ಯೂಯೊರ್ಕಿಗೆ ಸಾಗಿಸಲು ಅಮೇರಿಕನ್ ಹಡಗ ಕಂಪೆನಿಯೊಂದು ಸಮ್ಮತಿಸಿರುವುದು. ಈ ಎರಡು ಆನೆಗಳು ಮೈಸೂರಿನಿಂದ ಮುಂಬಾಯಿಗೆ ರೈಲಿನಲ್ಲಿ ಸಾಗಿಸಲ್ಪಟ್ಟದ್ದುವು. ಆ ವುಗಳ ಹೆಸರು ಅಶೋಕ ಮತ್ತು ಶಾಂತಿ ಎಂದು!

ಖೂನಿ, ಕೊಲೆಗಳ ಕುರಿತಾದ ಪತೆ ಹಚ್ಚುವ ಪೋಲೀಸ್ ಅಧಿಕಾರಿಗಳನ್ನು ತರಬೇತುಗೊಳಿಸುವ ಬಗ್ಗೆ ಒಂದು ಕಾಲೇಜು ಮುಂಬಯಿಯಲ್ಲಿ ಸದ್ಯದಲ್ಲೇ ತೆರೆಯಲ್ಪಡುವುದೆಂದು ಕೇಳಿಬರುತ್ತದೆ.

ಇಂಗ್ಲಂಡದಲ್ಲಿಯ ಅತ್ಯುತ್ತಮ ನಾಲ್ಕು ಕಂಪೆನಿಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಷೇಕ್ಸಪೀಯರಿನ್ ಕಂಪನಿಯು ಈ ವರ್ಷಾಂತ್ಯದಲ್ಲಿ ಭಾರತಕ್ಕೆ ಬರಲಿರುವದು.

ಪ್ರೊ. ಹೆರಾಲ್ಡ್ ಲಾಸ್ಕಿಯವರ ನಿಧನದಿಂದ ನಮ್ಮ ತಲೆಮಾರಿನ ಅತ್ಯಂತ ಪ್ರಭಾವಶಾಲಿ, ಮೇಧಾವಿಯೊಬ್ಬರನ್ನು ಕಳೆದುಕೊಂಡಂತಾಗಿದೆಯೆಂದು ಪಂಡಿತ ನೆಹ್ರೂ ಸಂತಾಪ ಸೂಚಿಸಿದ್ದಾರೆ.

ಕಾಳಸಂತೆ ನಡೆಸುವವರಿಗೂ, ತಿರಿಗೆಯನ್ನು ಕೊಡಲು ತಪ್ಪಿದವರಿಗೂ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಪ್ರೊ. ಕೆ. ಟಿ. ಷಾರವರು ತಂದಿದ್ದ ಮಸೂದೆಯನ್ನು ವಿಪುಲ ಚರ್ಚೆಯಾದ ಬಳಿಕ ಅವರು ಹಿಂದಕ್ಕೆ ತೆಗೆದುಕೊಂಡರು.

ಇನ್ನು ಮುಂದೆ ಭಾರತದಲ್ಲಿಯ ಅಂಚೆ ಕಚೇರಿ ರವಿವಾರ ಸಂಪೂರ್ಣ ಮುಚ್ಚಲ್ಪಡುವುದು ದೇಶದ ಒಳಗಡೆಯಲ್ಲಿ ಮತ್ತೆ ವಿಮಾನ ಅಂಚೆ ಪದ್ಧತಿಯನ್ನು ಪ್ರಾರಂಭಿಸಲಾಗುವುದು. ಇದರ ಬೆಲೆಯನ್ನು ಎರಡಾಣೆಯಿಂದ ೬ ಬಿಲ್ಲೆಗೆ ಇಳಿಸಲಾಗುವುದು ಎಂದು ಮುಂತಾಗಿ ಸಂಪರ್ಕ ಶಾಖೆಯ ಮಂತ್ರಿಗಳು ಹೇಳಿದರು.

ರೂಪಾಯಿ ಭಾರತೀಯ ಹೆಸರಾಗಿರುವುದರಿಂದ ತಮ್ಮ ನಾಣ್ಯಕ್ಕೆ ಬೇರೆ ಹೆಸರಿಡಲು ಪಾಕಿಸ್ತಾನಿಗಳು ಯೋಚಿಸಿದ್ದಾರೆ. ಹಿಲಾಲ, ಸರ್ಫಿಯಾ, ಚಾಂದ ಮೊದಲಾದ ಹೆಸರುಗಳು ಮುಂದೆ ಬಂದಿವೆ. ಬಹುಶಃ ಪಾಕಿಸ್ತಾನಿಗಳ ಹೆಚ್ಚಿನ ಪ್ರೀತಿಯ 'ಹಿಲಾಲ' ಎಂಬ ಹೆಸರನ್ನೇ ರೂಪಾಯಿ ನಾಣ್ಯಕ್ಕೆ ಇಡಬಹುದೆಂದು ಸುದ್ದಿಯಿದೆ.

ಆವಶ್ಯಕವಸ್ತುಗಳ ಬೆಲೆಗಳನ್ನಿಳಿಸುವ ಧೋರಣಕ್ಕನುಸಾರವಾಗಿ ಇದೇ ಮಾರ್ಚ್ ೧೬ ರಿಂದ ಮುಂಬಯಿ ಸರಕಾರವು ಎತ್ತುವಳಿ ಮಾಡುವ ಗೋದಿ ಮತ್ತು ಬಾರ್ಲಿ ಮೊದಲಾದ ಹಿಂಗಾರಿ ಧಾನ್ಯಗಳ ಬೆಲೆಯನ್ನು ೧೦೦ಕ್ಕೆ ೧೦ರಷ್ಟು ಕಡಮೆ ಮಾಡಿದೆ. ಕಡಲೆಯ ಬೆಲೆಯನ್ನು ಮಣಕ್ಕೆ ೧೪ ರೂ. ಗಳಿಂದ ೧೨ ರೂ. ಗಳಿಗೆ ಇಳಿಸಿದೆ.

"ಅಮೇರಿಕನ್ ಸರಕಾರವು, ಚಿಯಾಂಗ ಕೈಷೇಕರಿಗೆ ಯುದ್ಧೋಪಕರಣಗಳ ನೆರವು ನೀಡುತ್ತಲಿದೆಯಲ್ಲದೆ, 'ಗಿಳಿ ಸರಕಾರ' ಗಳಾದ ಬಾವೋದಾಯಿ, ಸಿಂಗಮನ್‌ರ್ಹೀ ಮತ್ತು ಕ್ವೀನೋ ಅವರಿಗೂ ಅದೇ ಬಗೆಯ ನೆರವು ನೀಡುತ್ತಲಿದೆ. ಏಷ್ಯಾಖಂಡ ಹಾಗೂ ಏಷ್ಯನರ ಬಗ್ಗೆ ಈ ಬಗೆಯ ಕೈ ಹಾಕುವ ಕಾರಭಾರವನ್ನು ಅದು ಇನ್ನು ನಿಲ್ಲಿಸಬೇಕು ಇಲ್ಲದಿದ್ದರೆ ಒಳಿತಾಗದು" ಎಂದು ಚೀನದ ಪರರಾಷ್ಟ್ರ ಮಂತ್ರಿ ಚೌಎನ್‌ಲಾಯಿಯವರು ಅಮೇರಿಕಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ.

ಕರಾಚಿಯಲ್ಲಿ ಘಟನಾ ಸಮಿತಿ ಮತ್ತು ಹೈಕೋರ್ಟಿನ ಮಧ್ಯದಲ್ಲಿ ಇರುವ ಚೌಕಿನಲ್ಲಿ ೧೯೪೬ ರಲ್ಲಿ ಸ್ಥಾಪಿತವಾಗಿರುವ ಮಹಾತ್ಮಾ ಗಾಂಧಿಯವರ ಪೂರ್ಣಾಕಾರದ ಪುತ್ಥಳಿಯನ್ನು ಅಲ್ಲಿಂದ ಕಿತ್ತು ವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆ. ಹಿಂದೀ ವಣಿಕ್ ಸಂಘದವರ ಬಿನ್ನಹದ ಮೇರೆಗೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರವರು ಈ ಪುತ್ಥಳಿಯನ್ನು ೧೯೪೬ ರಲ್ಲಿ ಉದ್ಘಾಟನ ಮಾಡಿದ್ದರು. ಅದು ಕೆಳಗ ಬಿದ್ದದ್ದರಿಂದ ಅದನ್ನು ವಸ್ತು ಸಂಗ್ರಹಾಲಯಕ್ಕೆ ಸಾಗಿಸಲಾಗಿದೆಯೆಂದೂ ಮತ್ತೆ ಅದನ್ನು ಅದೇ ಸ್ಥಳದಲ್ಲಿ ಇರಿಸಲಾಗುವುದೆಂದೂ ಪಾಕಿಸ್ತಾನ ಸರಕಾರವು ಅಧಿಕೃತವಾಗಿ ಪ್ರಕಟಿಸಿದೆ.

ವಾಶಿಂಗ್ಟನ್ನಿನ ಖಾಸಗಿ ವ್ಯಕ್ತಿಯೊಬ್ಬರ ವಿಳಾಸವಿದ್ದ ಒಂದು ಬುಟ್ಟಿಯು ಮುಂಬಯಿಯ ಹಾಫಕಿನ್ಸ್ ಇನ್ಸ್ಟಿಟ್ಯೂಟದಲ್ಲಿ ಬಂದಿದ್ದು, ಅದರಲ್ಲಿ ಮೈಸೂರಿನ ಹನ್ನೊಂದು ನಾಗರ ಹಾವುಗಳೂ ಒಂದು ಹಸರು ಹಾವೂ ಇರುವವಂತೆ!

ಭಾರತ ಪಾರ್ಲಿಮೆಂಟ ಸದಸ್ಯರೂ, ಆದ್ವಿತೀಯ ಕಾಯಿದೆ ಪಂಡಿತರೂ, ಅನುಪಮ ಸಾಹಿತಿಗಳೂ ಆದ ಶ್ರೀ. ಕನ್ಹಯ್ಯಾಲಾಲ ಮುನ್ಸಿ ಅವರು ತಮ್ಮ ಆರೋಗ್ಯಕ್ಕಾಗಿ ಪಶ್ಚಿಮ ಪ್ರವಾಸ ಕೈಕೊಂಡಿದ್ದು ಮಾರ್ಚ್ ೨೦ ಕ್ಕೆ ಲಂಡನಕ್ಕೆ ತಲಪಿದ್ದಾರೆ. ಅವರೊಡನೆ ಅವರ ಪತ್ನಿ ಶ್ರೀಮತಿ ಲೀಲಾವತಿ ಮುನ್ಸಿ ಅವರೂ ಇರುವರು.

ಭಾರತದ ಕೊನೆಯ ಗವರ್ನರ್ ಜನರಲ್ ಶ್ರೀ ರಾಜಾಜಿಯವರಿಗೆ ಅವರ ಜೀವಮಾನ ಪರ್ಯಂತ ಪ್ರತಿಷ್ಠೆಗಳು ಒಂದು ಸಾವಿರ ರೂಪಾಯಿ ವಿರಾಮ ವೇತನವನ್ನು ಕೊಡುವುದನ್ನು ಕೇಂದ್ರಸರಕಾರ ಮಂಜೂರು ಮಾಡಿರುವುದೆಂದು ಅರ್ಥ ಮಂತ್ರಿಗಳು ಹೇಳಿದ್ದಾರೆ.

ಜಿ. ಆಯ್. ಪಿ. ರೇಲ್ವೆಯ ಮುಂಬಯಿ ಟಿಕೆಟ್ ಕಲೆಕ್ಟರನ ಕೊಣೆಯನ್ನು ಸಂಶಯದಿಂದ ಮುಂಬಯಿ ಪೋಲೀಸರು ಧುಮುಡತಿಮಾಡಲಾಗಿ 'ಕಮ್ಯೂನಿಸ್ಟ ಕಚೇರಿ'ಯೇ ಆಲ್ಲಿತ್ತು. ಅಲ್ಲಿಯ ನೆಲಮನೆಯಲ್ಲಿ ಅರು ಕೈಬಾಂಬುಗಳು ೪೦ ಕಾಡತೂಸುಗಳು ಮುದ್ರಣ ಸಾಮಗ್ರಿಗಳು, ಕಮ್ಯೂನಿಸ್ಟ ಕಾರ್ಯಕರ್ತರಿಗೆ ಕಳಿಸಿದ ಪತ್ರಗಳು, ಅವರಿಂದ ಬಂದ ಗುಪ್ತ ವರದಿಗಳು, ಮೊದಲಾದ ಸಾಮಗ್ರಿಗಳು ದೊರೆತಿದ್ದು ವಿಚಾರಣೆ ನಡೆದಿದೆ.

ಪೂರ್ವ ಬಂಗಾಳ, ಪಶ್ಚಿಮ ಬಂಗಾಳ ಹಾಗೂ ಅಸಾಮಿನಗಳಲ್ಲಿ ಕಳೆದ ಕೆಲವಾರಗಳಿಂದಲೂ, ನಡೆದ ಹಿಂಸಾ ಘಟನೆಗಳ ಬಗ್ಗೆ ನನಗೆ ಅತೀವ ದುಃಖವಾಗಿದೆ. ಎಂದು ಪಾಕಿಸ್ತಾನ 'ಮುಖ್ಯ ಮಂತ್ರಿ ಲಿಯೂಖತ್ ಅಲಿಖಾನರು, ಡಾಕಾ ಆಕಾಶವಾಣಿ ಮುಖಾಂತರ ಸಾರಿದ್ದಾರೆ.

ಸರ್. ಸಿ. ವಿ. ರಾಮನ್‌ರ ನೂತನ ಸಂಶೋಧನೆ.

ಗಾಜು ಮುಂತಾದ ಅಸ್ಫಟಿಕ ಪದಾರ್ಥಗಳ ಗುಣದಲ್ಲಿ ಇದು ವರೆಗೂ ಕಂಡುಹಿಡಿಯದಿದ್ದಂತಹ ಹೊಸ ವಿಚಾರವನ್ನು ಸರ್ ಸಿ. ವಿ. ರಾಮನ್‌ರವರು ಈಗ ಕಂಡುಹಿಡಿದಿದ್ದಾರೆ. ಕೆಲವು ಬಗೆಯ ಸಿಲಿಕಾ ಗಾಜುಗಳಲ್ಲಿ ಎರಡುಬಾರಿ ಬೆಳಕಿನ ವಕ್ರೀಕರಣ [ಡಬಲ್ ರಿಫ್ರಾಕ್ಷನ್] ಆಗುವುದೆಂಬುದನ್ನು ಅವರು ಕಂಡುಹಿಡಿದಿದ್ದಾರೆ. ಇದಕ್ಕೆ ಇವರು 'ಸ್ಟ್ರಕ್ಚರಲ್-ಬೈ-ರಿಫ್ರೆಜೆನ್ಸ್' ಎಂದು ಹೆಸರಿಟ್ಟಿದ್ದಾರೆ. ಈಗಾಗಲೇ ವಿಜ್ಞಾನಿಗಳಿಗೆ ತಿಳಿದಿರುವ 'ಸ್ಟೆಸ್-ಬೈ-ರಿಫ್ರೆಜೆನ್ಸ್' ಎಂಬುದರಿಂದ ಇದು ಬೇರೆಯಾದುದು.

ಲಿಬಿಯಾದ ಮರಳುಗಾಡಿನಿಂದ ತರಿಸಿದ ಕೆಲವು ಅಪರೂಪ ಸಿಲಿಕಾ ಗಾಜುಗಳ ಮೂದರಿಗಳ ವೇಳೆ ನಡೆಸಿದ ಆಳವಾದ ಸಂಶೋಧನೆಯಿಂದ ಸರ್ ಸಿ ವಿ. ರಾಮನ್ ಇದನ್ನು ಕಂಡು ಹಿಡಿದಿದ್ದಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಹುಬ್ಬಳ್ಳಿ

ಪ್ರಕಟಣೆ.

ಕಾಂಗ್ರೆಸ್ ಪ್ರಾಥಮಿಕ ಪಂಚಾಯತಿಗಳ ಚುನಾವಣೆಗಳು ಇದೇ ತಿಂಗಳ ಕೊನೆಯೊಳಗಾಗಿ ಮುಗಿಯಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಿಂದ ತಿಳಿಸಲಾಗಿತ್ತು. ಆದರೆ ಚುನಾವಣೆಯ ತಾರೀಕುಗಳನ್ನು ಈ ವರೆಗೆ ಗೊತ್ತುಮಾಡಿ ತಿಳಿಸದೇ ಇದ್ದುದರಿಂದ ಪಂಚಾಯತಿಗಳ ಚುನಾವಣೆಗಳು ಇಷ್ಟರಲ್ಲಿಯೇ ನಡೆಯದೆ ಕೆಲವು ದಿವಸ ಮುಂದೆ ಬೀಳಬಹುದು. ಅಖಿಲ ಭಾರತ ಕಾಂಗ್ರೆಸು ಸಮಿತಿಯವರು ಚುನಾವಣೆ ದಿನಾಂಕಗಳನ್ನು ಗೊತ್ತುಮಾಡಿ ತಿಳಿಸಿದ ಕೂಡಲೇ ವೇಳಾಪತ್ರಿಕೆಯನ್ನು ತಯಾರಿಸಿ ಪ್ರಸಿದ್ಧಿಸಲಾಗುವದು. ಈ ಪ್ರಕಾರ ತಿಳಿಸುವವರೆಗೆ ಚುನಾವಣೆಗಳನ್ನು ನಡೆಯಿಸಕೂಡದು. ಇಷ್ಟರಲ್ಲಿ ಯಾವುದೇ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಚುನಾವಣೆ ನಡೆಯಿಸಿದ್ದರೆ ಅವುಗಳನ್ನು ರಹಿತಮಾಡಬೇಕು.

ವಿ. ಪಿ. ಮೂಗಡಿ.
ಕಾರ್ಯದರ್ಶಿ.

ಡಾ. ಎಂ. ಎಂ. ಚಂಗಪ್ಪ
ಎಂ. ಬಿ., ಬಿ. ಎಸ್.
ಇವರು ತಮ್ಮ ವೈದ್ಯಕೀಯ ಸಲಹಾ ಕೇಂದ್ರ ಮತ್ತು ಔಷಧಾಲಯವನ್ನು ವೀರಾಜಪೇಟೆಯಲ್ಲಿ ತೆರೆದಿರುವರು.
3-3

ಸರ್ವಸಮತೆಯ ಸೋಗಿನಲ್ಲಿ

ಸ್ವಾರ್ಥವು ಬೆಳೆ ಬೆಳೆದಂತೆ ಸುಖಕ್ಕೆ ಸಂಚಕಾರವು ಬರುವುದು ಕಟ್ಟಿಟ್ಟಬುತ್ತಿ. ಜಗತ್ತಿನಲ್ಲಿ ಇಂದು ನಡೆದಿರುವ ಅಶಾಂತಿಯ ಕೋಲಾಹಲಕ್ಕೆ ಕಮ್ಯೂನಿಜಂ ಮತ್ತು ಬಂಡವಳವಾದಗಳೆರಡೂ, ಸರ್ವ ಸಮತೆಯ ಸೋಗಿನಲ್ಲಿ, ತಮ್ಮತಮ್ಮ ಕುದುರೆಗಳನ್ನು ಮುಂದೋಡಿಸುತ್ತ "ಸ್ವಾರ್ಥ" ಸಾಧಿಸಲು ಹೆಣಗುತ್ತಿರುವುದೇ, ಏಕಮೇವ ಕಾರಣವಾಗಿದೆ.

ಬಂಡವಳವಾದ ಪ್ರಣಾಲಿಯ ದೇಶಗಳು ಡೆಮೊಕ್ರಸಿ, ಕಾಮನ್‌ವೆಲ್ತ್, ರಿಪಬ್ಲಿಕ್ ಮೊದಲಾದ ಹೆಸರಿನಲ್ಲಿ ಆಡಳಿತ ಸಿರಿವಂತಿಕೆಗಳನ್ನು ದೊರಕಿಸುವ ಹವ್ಯಾಸದಲ್ಲಿದ್ದಂತೆ, ಸೋವಿಯೆಟ್ ರಶಿಯಾ ಕಮ್ಯೂನಿಜಂನ ಹೆಸರಿನಲ್ಲಿ "ಆಧಿಕಾರ"ದ ಹವ್ಯಾಸದಲ್ಲಿದೆಯೆಂಬುದು ಯಾವಾಗಲೂ ತಿಳಿದವರು ಹೇಳುತ್ತಿರುವ ಮಾತಾಗಿದೆ.

ನಿಜವಾಗಿ ಹೇಳಬೇಕೆಂದರೆ ಇಂದಿನ ಕಮ್ಯೂನಿಜಂವು ಯಾವುದೇ ಸಾಮಾಜಿಕ ಅಥವಾ ರಾಜಕೀಯ ತತ್ವವಾಗಿಲ್ಲ. ಆದರೆ ಜಗತ್ತಿನ ರಾಷ್ಟ್ರಗಳ ಮೇಲೆ ಮತ್ತು ಜನರ ಮೇಲೆ ಅಧಿಕಾರ ಹಿಡಿತಗಳನ್ನಿಟ್ಟುಕೊಳ್ಳಲು ಇದೊಂದು ಸಾಧನವಾಗಿದೆಯೆಂದು ಹೇಳಬಹುದು.

ಕಮ್ಯೂನಿಜಂ ಕರ್ಮಭೂಮಿಯಾದ ರಶಿಯಾದಲ್ಲಿಯೇ, ಉಚ್ಚಾಧಿಕಾರಿಗಳ ಹಾಗೂ ಜನಸಾಮಾನ್ಯರ ಜೀವನದ ರೀತಿ ನೀತಿಗಳನ್ನು ಪರಿಶೀಲಿಸಿದರೆ, ನಡುಓಣಿಯಲ್ಲಿ ಪ್ರಚಾರ ಮಾಡುವುದರ ಕೊಲೆಯನ್ನು ನಡುವ ನೆಯಲ್ಲಿ ಮಾಡುತ್ತಿರುವುದನ್ನು ಕಾಣಬಹುದು.

ದಲಿತೋದ್ಧಾರಕ್ಕೆಂದೇ ಮುಡುಪಿಟ್ಟ ಸೋವಿಯೆಟಯಲ್ಲಿಯೇ ಉಳಿದ ಜಗತ್ತಿನ ದಲಿತರಿಗಿಂತಲೂ ದಲಿತರಾದ ಗೋಳಿಡುವ ಜನ ಜಂಗುಳಿಯಿದೆ. ಬಂಡವಾಳಗಾರರಿಗಿಂತಲೂ ಹೆಚ್ಚು ರಕ್ತಹೀರಿ ವೋಜುಮಾಡುವ ಸೋವಿಯೆಟ್ ಅಧಿಕಾರಿಗಳಿದ್ದಾರೆ.

ಜಗತ್ತಿನ ತುಂಬಾ ಹರಿಬಿಟ್ಟ ಸರ್ವ ಸಮತೆಯ ಸೋಗಿನಲ್ಲಿ ಸೋವಿಯೆಟ್ ಸ್ವರ್ಗ ತೋರಿಸಿ ಬಡಬಗ್ಗರನ್ನು ಬಲಿಹಾಕುತ್ತಿರುವ ಕಮ್ಯೂನಿಸ್ಟರೂ, ಅವರ ತತ್ವ ಕಮ್ಯೂನಿಜಂವೂ ಹೇಗಿದೆ ಎಂಬುದನ್ನು ಕೆಳಗಿನ ಎರಡು ಚಿಕ್ಕ ಉದಾಹರಣೆಗಳು ಹೇಳುತ್ತವೆ.

ರಶಿಯಾದಲ್ಲಿ ಅನುಕೂಲವುಳ್ಳ, ಪುಣ್ಯವಂತ ವರ್ಗ ವೊಂದಿದೆ. ಅವರ ಅಧಿಕಾರ ಸಂಪತ್ತು, ಉತ್ಪಾದನಾನೂರ್ಗಳು ಬಂಡವಳಗಾರರಿಗೂ ಹೊಟ್ಟಿಕಿಚ್ಚು ಹುಟ್ಟಿಸುವಂತಿವೆ. ಇವರೂ ಕಮ್ಯೂನಿಸ್ಟರೇ! ಕಮ್ಯೂನಿಜಂದ ಉಚ್ಚ ವರ್ಗದ ಸದಸ್ಯರೇ!

ಕಮ್ಯೂನಿಜಂ ಜೀವಾಳವೆಂದರೇ ಗುಪ್ತದಳ. ಜರ್ಮನಿಯು ಹಿಟ್ಲರನ್‌ಗೆ ಗುಪ್ತದಳವಿದ್ದಂತೆ. ಯಾವದೇ ಕಮ್ಯೂನಿಸ್ಟ ದೇಶದ ಯಾವದೇ ಉಚ್ಚ-ಸ್ವಲ್ಪ ಉಚ್ಚ ಅಧಿಕಾರಿಗೂ ಈ ಗುಪ್ತದಳದ ಭಯವಿದೆ. ಯಾವ ಹೊತ್ತಿಗೆ ತನ್ನ, ತನ್ನ ಸ್ಥಾನವೂನದ ಗತಿ ಏನಾದೀತೆಂಬದೂ ಹೇಳಲು ಆಗುವಂತಿಲ್ಲ.

ಈ ಹೆದರಿಕೆಯಿಂದಲೇ, ಕಮ್ಯೂನಿಸ್ಟ ದೇಶದ ಒಡೆದು ತೋರುವ ನಾಗರಿಕರು, ಉಚ್ಚ ಅಧಿಕಾರಿಗಳು, ಸೋವಿಯೆಟ್ ಸ್ವರ್ಗದ ಮಿಟಮಿಟೇ ಜೀವನಕ್ಕೆ ಬೇಸತ್ತು ಬೇಜಾರುಹೊಕ್ಕು, ಡೆಮೊಕ್ರೆಟಿಕ್ ದೇಶಗಳಿಗೆ ಓಡಿಹೋದ, ಹಾಗೂ ಕಮ್ಯೂನಿಜಂದಿಂದ ತಿರುಗಿದ ಅನೇಕ ಉದಾಹರಣೆಗಳುಂಟು.

ಎರಡು ದೃಷ್ಟಾಂತಗಳು.

ಕ್ರೀವಚೆಂಕೋ ಸೋವಿಯೆಟ್ ಸ್ವರ್ಗದ ಉಚ್ಚಾಧಿಕಾರಿ. ಅವನಿಗೆ ಆ ರಾಜ್ಯದಲ್ಲಿ ಸಾಕಷ್ಟು ಅನುಕೂಲತೆಗಳು. ಆದರೆ ಗುಪ್ತದಳದ ಭಯ ಹಾಗೂ ಸ್ವಾತಂತ್ರ್ಯ ಪಿಪಾಸೆಗಳಿಂದ ಅವನ ಜೀವನವು ಸೋವಿಯೆಟ್‌ದಿಂದ ಪಾರಾಗಲು ಹವಣಿಸುತ್ತಿತ್ತು. ಗುಪ್ತದಳದ ಹೇಳಿಕೆ ಸರ್ವ ಮಾನ್ಯತೆಯಿದ್ದ ಸೋವಿಯೆಟದಲ್ಲಿ ಉಚ್ಚ ಅಧಿಕಾರಿಗಳ ಕರುಣಾಕ್ರಂದನ ಆಧಃಪತನವನ್ನು ಅವನು ಕಂಡಿದ್ದ. ಆದ್ದರಿಂದಲೇ ಭಯಪಟ್ಟು ಸ್ವಾತಂತ್ರ್ಯವನ್ನು ಬಯಸಿ, ಏನೇನೋ ಯುಕ್ತಿಪ್ರಯುಕ್ತಿಗಳನ್ನು ಹೂಡಿ, ಅಮೇರಿಕೆಯಲ್ಲಿದ್ದ 'ಸೋವಿಯೆಟ್ ವ್ಯಾಪಾರೀ ಕಮಿಶನ್'ದಲ್ಲಿ ಸ್ಥಾನವೊರಕಿಸಿ ಆದೇ ನೆವದಿಂದ ಸೋವಿಯೆಟ್‌ದಿಂದ ಪಾರಾಗಿ ಅಮೇರಿಕೆಗೆ ಬಂದ. ಸೋವಿಯೆಟ್‌ಕ್ಕೆ ಶರಣು ಹೊಡೆದ. ಅವನು ಬರೆದ 'ನಾನು ಸ್ವಾತಂತ್ರ್ಯವನ್ನು ಅರಿಸಿದೆ' ಎಂಬ ಪುಸ್ತಕದಲ್ಲಿ ಈ ಸಂಗತಿಗಳ ಮೇಲೆಲ್ಲ ಬೆಳಕು ಕೆಡವಿದ್ದಾನೆ. ಹೀಗೆ ಅವನು ತಪ್ಪಿಸಿಕೊಂಡು ಹೊರಬಿದ್ದು, ಸ್ವತಂತ್ರ ಪ್ರಜಾಪ್ರಭುತ್ವ ರಾಜ್ಯದಲ್ಲಿದ್ದರೂ ಸೋವಿಯೆಟ್ ಗುಪ್ತದಳದ ಹೆದರಿಕೆ ಅವನಿಗೆ ತಪ್ಪಿಲ್ಲ. ಯಾವ ಹೊತ್ತಿಗೆ ಅನುರಿಂದ ತನ್ನ ತಲೆಗೆ ಸಂಚಕಾರವು ಬರುವುದೋ ಎಂದು ಅವನು ಯಾವ ಗಲೂ ಭಯಪಟ್ಟುಕೊಂಡಿರುತ್ತಾನೆ.

ಎರಡನೆಯ ಉದಾಹರಣೆ ಓರ್ವ ಇಂಗ್ಲಿಷ್ ಹುಡುಗಿಯದು. ಬಿಳಿದೊಗಲಿನ ಈ ಹುಡುಗಿಯ ಹೆಸರು ಫ್ರೆಡ್ಡಾ ಆಟ್ಲೆ. ಅವಳು ಕಲಿತವಳು. ಚೆಲುವೆ, ಅಲ್ಲದೆ ಜನತೆಯ ಸಮೂನಾಧಿಕಾರದಲ್ಲಿಯೂ ಸೋಶಿಯೊಲಿಜಂದಲ್ಲಿಯೂ ತುಂಬಾ ಒಲವಿದ್ದಾಕೆ. ಆಕೆ ಕಮ್ಯೂನಿಜಂವನ್ನು ಅಭ್ಯಸಿಸಿದಳು ವಿಶ್ವಮೈತ್ರಿಗೆ ಕಮ್ಯೂನಿಜಂ ನೇ ಅವಶ್ಯ ಸಿದ್ಧಾಂತವೆಂದು ಸಾರಿದಳು. ಕಮ್ಯೂನಿಸ್ಟ ಪ್ರಣಾಲಿಯು ಲಹರಿಲಹರಿಗಳು ಈ ಬಿಟ್ಟನಿನ ಹುಡಿಗೆಯು ರೋಮು ರೋಮು ರಕ್ತ ರಕ್ತದಲ್ಲಿಯೂ ತುಂಬಿಕೊಂಡವು. ನರಗಳ ಜಿಗಿತವೂ ಕೂಡ ಕಮ್ಯೂನಿಜಂಕ್ಕೆ ತಕ್ಕ ತಾಳ ಹಾಕತೊಡಗಿತು.

ಈ ತರುಣಿ ಫ್ರೆಡ್ಡಾ, ಆ ಒಲವಿನಲ್ಲಿಯೇ ಓರ್ವ ರಶಿಯನನ್ನು ಮದುವೆಯೂ ದಳು. ಅತ್ತೆಮನೆ ಸೋವಿಯೆಟ್ ರಶಿಯಾಕ್ಕೆ ಹೋದಳು. ಅಲ್ಲಿ ಆರು ವರ್ಷ ಸಂಸಾರ ಮಾಡಿದಳು. ಕಮ್ಯೂನಿಜಂದ ವರಪ್ರದಾನದ ಗಳಿಗೆ ಬಂದಿತು.

ಸೋವಿಯೆಟ್‌ದ ಉಚ್ಚ ಅಧಿಕಾರಿಯಾದ ಆಕೆಯ ಗಂಡ ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾದ. ಸೋವಿಯೆಟ್ ಗುಪ್ತ ದಳದವರು ಆ ಉಚ್ಚ ಅಧಿಕಾರಿಯನ್ನು ಸೆರೆಹಿಡಿದಿದ್ದರು. ತನ್ನ ಗಂಡನ ಅಪರಾಧವೇನೆಂಬ ಬಗ್ಗೆ ಆಕೆಗೂ ಹೇಳಲಾಗಲಿಲ್ಲ. ಗಂಡನಿಗೂ ಹೇಳಲಾಗಲಿಲ್ಲ. ಅವನ ಅವಸ್ಥೆ ಏನಾಯಿತೆಂಬುದು ಆಕೆಗೆ ತಿಳಿಯಲಿಲ್ಲ. ಮುಂದೆ ಎಂದೆಂದೂ ಅವಳು ಅವನನ್ನು ಕಾಣಲಿಲ್ಲ.

ಅವಳ ಸೋವಿಯೆಟ್ ಸ್ವರ್ಗದ ಮುದವಿಳಿಯಿತು. ಫ್ರೆಡ್ಡಾ ಇಂಗ್ಲೆಂಡಿಗೆ ಬಂದಳು. ಕಮ್ಯೂನಿಜಂದ ನಿಜ ಅರ್ಥವನ್ನು ಕಂಡಿತು ಆಕೆ ಬೇಕಾದಷ್ಟು ಹೇಳಿದಳು. ಬರೆದಳು. 'ಕಮ್ಯೂನಿಜಂ ಎಂದರೇನೆ ಅದೊಂದು ಮಹಾಮೋಸ. ಸಮತೆಯ ಮುಸುಕಿನ ಕ್ರೂರ ಸರ್ವಾಧಿಕಾರಿತ್ವ' ಎಂದು ಅವಳು ಸಾರಿದ್ದಾಳೆ.

ನಿಜಸ್ವರೂಪ.

ಈ ರೀತಿಯಾದ ಪ್ರತ್ಯಕ್ಷ ಉದಾಹರಣೆಗಳೇ ಈ ಕಮ್ಯೂನಿಜಂದ ಬಗ್ಗೆ ತಮ್ಮ ಅನುಭವವನ್ನು ಹೇಳುತ್ತಿರುವಾಗ ಅದರ ಸರ್ವ ಸಮತೆಯ ಬಗ್ಗೆ ಯಾರಿಗಾದರೂ ಸಂಶಯವು ಬರದೆ ಇಂದು. ಸರ್ವಸಮತೆಯ ಸೋಗಿನ ಸೋವಿಯೆಟ್ ಸ್ವರ್ಗ ಜೀವನದ ನಿಜ ಸ್ವರೂಪವನ್ನು ಕಂಡವರೆಗೆಲ್ಲ ಹೀಗೆಯೇ ಭ್ರಮನಿರಸನವಾಗದೆ ಇರಲಾರದು.

ಕಮ್ಯೂನಿಸ್ಟ ಕ್ಷೇತ್ರವಾದ ಹಾಗೂ ಜಾಗತಿಕ ಕಮ್ಯೂನಿಸ್ಟರ ಕೇಂದ್ರವಾದ ರಶಿಯಾದಲ್ಲಿಯೇ, ಸಮತೆಯ ಸೋಗಿನ ಸೋವಿಯೆಟ್ ರಶಿಯಾದಲ್ಲಿಯೇ, ಹಿಟ್ಲರನ ಸರ್ವಾಧಿಕಾರವನ್ನು ವಿರೋಸುವ ತೀಕ್ಷ್ಣತೆಯಿದೆ. ಮುಸ್ಸೋಲಿಯನ್ನೂ ವಿರೋಸುವ ಕ್ಕಾರ್ಯವಿದೆ. ಮೇಲಾಗಿ, ಕಮ್ಯೂನಿಸ್ಟ 'ಗುಪ್ತದಳ'ದ ಯಮದೂತರ ಭಯವಂತೂ ಸರ್ವಕಾಲ ಇದ್ದೇ ಇದೆ. ಇಂಥಲ್ಲಿ, ಸಾಮಾನ್ಯ ಜನ ಜೀವನವು ಸುಖ ಸಮಾಧಾನದಿಂದಿರಲು ಸಾಧ್ಯವೇ?

'ಜ್ವೆಹಿಂದ್.'

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ಲೇಜರ್‌ಪೇಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣಾಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವೆಂದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ಲೇಜರ್‌ಪೇಟೆ,
ತಾ. 30-9-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ದಿ ಟ್ರೂಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.
ಮುಖ್ಯ ಖಜೇರಿ:– ಹೊಸದಿಲ್ಲಿ.
ಸ್ಥಾಪಿಸಿದ ಡೈರೆಕ್ಟರರು:
ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.
Transacts:—Life, Fire, Motor and Marine.
ಯಂ. ಯು. ಅಚ್ಚಣ್ಣ, ಎಂ. ಎ. ಬೆಳ್ಯಪ್ಪ,
ವಿಜೆನ್ಸಿ ಸುಪರಿಂಟೆಂಡೆಂಟ್, ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು. ಹೆಂಪನಕಟ್ಟೆ, ಬೆಂಗಳೂರು.

The Popular Insurance Company Ltd.
Established over 20 years ago, the Company is noted for its sound progress, careful management and efficient service to its constituents.
Agents on permanent and remunerative contracts are wanted in COORG. Apply today:
Head Office:
MANGALORE
26-2
K. M. Bopaiah, Esq.,
Branch Secretary for
Mysore & Coorg,
85 Sultanpet, BANGALORE 2.

ನಾವೇಕೆ ನಗಾಡುವೆವು?

ಲೇ:—ಶ್ರೀ. 'ಗಣೇಶ' ಮಡಿಕೇರಿ.

ಇದೆಂಥಾ ವಿಚಿತ್ರ ಪಶ್ನೆ ಎಂದು ಎಲ್ಲರೂ ಕೇಳದಿರರು. ಆದರೂ ಇದರಲ್ಲಿಯೇ ನಮಗೂ ಜಗತ್ತಿನ ಇತರ ಜೀವ ಜಂತುಗಳಿಗೂ ಇರುವ ಅಂತರವು ಕಂಡು ಬರುತ್ತದೆ. ಮನುಷ್ಯನು ಭೂಮಿಯಲ್ಲಿ ಜನಗಿಂಥಾ ಬುದ್ಧಿವಂತನಿಲ್ಲವೆಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಕಾಲವಿತ್ತು. ಆದರೆ ಕಾಲಡಿಯಲ್ಲಿ ಹರಿದಾಡುವ ಇರುವೆಗಳು; ಆಕಾಶದಲ್ಲಿ ಸಂಗೀತ ಹಾಡುತ್ತಾ ಸಂಚರಿಸುವ ಜೇನ್ನೊಣಗಳು ತಮ್ಮ ಬುದ್ಧಿವಂತಿಕೆ, ಶಿಸ್ತು, ಸಂಘಟನೆ, ಸಾಮೂಹಿಕ ಜೀವನಕ್ರಮಗಳಿಂದ ಮನುಷ್ಯನು ತಲೆತಗ್ಗಿಸುವಂತೆ ಮಾಡಿವೆ ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸವೆಂದರೆ ಮನುಷ್ಯನಿಗೆ ವಿಚಾರ ಶಕ್ತಿ ಇದೆ; ಪ್ರಾಣಿಗಳಿಗೆ ಇಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಪ್ರಾಣಿಗಳಿಗೂ ವಿಚಾರಶಕ್ತಿ ಇದರಲ್ಲೂ ಕೆಲವಕ್ಕೆ ಮನುಷ್ಯನನ್ನು ವಿಂಗಡಿಸುವ ವಿಚಾರ ಶಕ್ತಿ ಇದೆ ಎಂದು ಹೇಳಬೇಕಾಗುತ್ತದೆ. ಕೆಲವು ಹಕ್ಕಿಗಳು ಕಟ್ಟುವ ಗೂಡುಗಳು, ಮುಂದಿನ ಗಂಡಾಂತರಕ್ಕೆಂದು ಇಂದು ಅವು ಏರ್ಪಡಿಸಿಕೊಳ್ಳುವ ಅನುಕೂಲತೆಗಳು, ಕೇಡಿಯನ್ನು ಗುರ್ತಿಸಿ ವಿರೋಧಿಸುವ, ಪ್ರೀತಿಸುವವನ್ನು ಮೆಚ್ಚಿ ನಲಿದಾಡುವ ಅವುಗಳ ವಿಚಾರ ಶಕ್ತಿ ಕಡಿಮೆಯಲ್ಲ. ಹಿರಿಯರನ್ನು ಕಂಡು ಹರಿಹಾಯುವ ಧನವು ಮುದ್ದುಮಕ್ಕಳೊಡನೆ ಸರಸವಾಡುವದು. ಆಧುನಿಕ ನಾಗರೀಕ ಸರಕಾರಗಳನ್ನು ವಿಂಗಡಿಸುವ ರಾಜ್ಯಭಾರ ಕ್ರಮವನ್ನು ಜಾರಿಗೆ ತಂದು ಸುಖದಲ್ಲಿ ಜೀವಿಸಿ ಜೇನ್ನೊಣಗಳು ಮನುಷ್ಯನ ಬಾಯಿ ಮುಚ್ಚಿಸಿವೆ. ಆದ್ದರಿಂದ ಮನುಷ್ಯನು ಪ್ರಾಣಿಗಳನ್ನು ವಿಂಗಡಿಸಿದವನೆಂದು ಹೇಳಲು ಸಾಧ್ಯವಿಲ್ಲ! ಮನುಷ್ಯನು ಶಕ್ತಿಶಾಲಿ ಎನಿಸಿದರೆ ಅತನಿಗಿಂಥಾ ಶಕ್ತಿಯುತ ಪ್ರಾಣಿಗಳಿವೆ. ಹುಲಿಯು ಕ್ರೂರ ಪ್ರಾಣಿ ಎಂದರೆ ಮನುಷ್ಯನ ಕ್ರೌರ್ಯವೇನು ಕಡಿಮೆಯಲ್ಲ! ಮನುಷ್ಯನು ಪ್ರಾಣಿವರ್ಗದವನೆನ್ನಲು ಅತನಲ್ಲಿರುವ ಪ್ರಾಣಿಬುದ್ಧಿ ಒಂದೆರಡಲ್ಲ. ಅತನಲ್ಲಿ ನರಿಯ ಕುತಂತ್ರವೂ, ಇರುವೆಯ ಬುದ್ಧಿಯೂ, ಬಕನ ವೇಶವೂ ಸಮೂವೇಶಗೊಂಡಿದೆ. ಒಂದು ದೃಷ್ಟಿಯಿಂದ ಮನುಷ್ಯನೂ ಪ್ರಾಣಿಯೆ! ಅತನು ಒಂದು ವಿಧದಲ್ಲಿ ವೂತಾಡಿದರೆ ಪ್ರಾಣಿಗಳು ಬೇರೆ ವಿಧದಲ್ಲಿ! ನಮಗರ್ಥವಾಗದ ಚೈನಿಯೂ ಇತರ ಭಾಷೆಗಳು ಪ್ರಾಣಿಗಳ ಕೂಗಿಗಿಂಥಾ ಹೆಚ್ಚಿನ ಅರ್ಥವನ್ನು ನಮಗೆ ಕೊಡಲಾಪುವೇ?

ಇಷ್ಟೆಲ್ಲಾ ಪ್ರಾಣಿವರ್ಗಕ್ಕೂ ಮನುಷ್ಯ ಕುಲಕ್ಕೂ ಸಂಬಂಧವಿದ್ದರೂ ಒಂದು ವಿಚಾರದಲ್ಲಿ ಭಿನ್ನತೆ ಇದೆ. ಮನುಷ್ಯನು ನಗಾಡುತ್ತಾನೆ. ಇತರ ಯಾವ ಪ್ರಾಣಿಗಳೂ ನಗಾಡಲಾರವು! ತನ್ನ ಹೃದಯದ ಭಾವನೆಯನ್ನು ಬಚ್ಚಿಡದೆ ಒಡಲನ್ನು ಬಿಚ್ಚಿ ನಗುವಿನ ಮೂಲಕ ವ್ಯಕ್ತಪಡಿಸುವ ಭಾಗ್ಯ ಮನುಷ್ಯನಿಗೆ ಮಾತ್ರ ಇದೆ. ನಗುವು ಸುಖದ ಚಿಹ್ನೆ ಮಾತ್ರವಲ್ಲ; ಅದು ದುಃಖದ ಪ್ರತೀಕವೂ ಆಗಬಹುದು. ಸುಖದಲ್ಲಿಯೂ ದುಃಖದಲ್ಲಿಯೂ ಕಂಬನಿ ಸುರಿಸುವಂತೆ ನಗುವೂ ಕೂಡ ಒಂದು ಮನೋಹರವಾದರೆ ಮತ್ತೊಂದು ವಿಕೃತ ಮತ್ತು ಭೀಕರ!

ಮನೋ ವಿಜ್ಞಾನಿಗಳು ನಗುವಿನ ಆದಿ ಮತ್ತು ಅಂತ್ಯವನ್ನು ಕಂಡು ಹಿಡಿಯಲು ನಾನಾ ರೀತಿಯ ವಿಶ್ಲೇಷಣ ಮಾಡಿದ್ದಾರೆ. ಅದರ ಅಂತರ್ಗತ ಮತ್ತು ಬಹಿರ್ಗತ ರಚನೆ, ನಿರ್ಮಾಣಗಳ ವಿಚಾರ ಆಲೋಚಿಸಿದ್ದಾರೆ. ನಗುವು ನಗುವಾತನಿಗೆ ಆಹ್ಲಾದಕರವಾಗಿರಬಹುದು. ಆದೇ ನಗು ಮತ್ತೊಬ್ಬನಿಗೆ ದುಃಖದಾಯಕವಾಗಲೂ ಬಹುದು. ಇಲ್ಲವೇ ಇನ್ನೊಬ್ಬನಲ್ಲೂ ನಗುವಿನ ಹೊನಲನ್ನು ಹರಿಸಬಹುದು. ಕಾಲೇಜಿಗೆ ಹೊಸದಾಗಿ ಒಬ್ಬ ವಿದ್ಯಾರ್ಥಿ ಸೇರಿದನೆನ್ನೋಣ. ಅತನನ್ನ ರೀಕಿಸಿ ನಗುವದು ಕೆಲವರ ಹವ್ಯಾಸವಾದರೆ ಅತನಿಗೆ ಧೈರ್ಯಹೇಳಿ ಸಹಾನುಭೂತಿ ತೋರಿಸುವವರು ಕೆಲವರಿರುತ್ತಾರೆ. ರಸ್ತೆಯಲ್ಲಿ ಒಂದೇ ಕಣ್ಣಿರುವವನ್ನೊಬ್ಬನನ್ನು ಕಂಡಾಗ ಕೆಲವರು ನಗುತ್ತಾರೆ; ಮತ್ತೆ ಕೆಲವರು 'ಪಾಪ' ಎಂದು 'ಸಹಾನುಭೂತಿ ಪ್ರದರ್ಶಿಸುತ್ತಾರೆ. ಒಮ್ಮೆ ನಗುವನ್ನು ತಂದ ಪರಿಸ್ಥಿತಿಯೇ ಮತ್ತೊಮ್ಮೆ ಸಹಾನುಭೂತಿಯನ್ನು ಅದೇ ವ್ಯಕ್ತಿಯಲ್ಲಿ ಶರಬಹುದು.

ನಗೆಯ ವಿವರ್ಶೆಮಾಡಿ ವೈಜ್ಞಾನಿಕವಾಗಿ ಶೋಧಿಸಿದ ಹಲವರು ಅದರ ಕಾರಣವನ್ನು ಹಲವು ವಿಧವಾಗಿ ಕೊಟ್ಟಿದ್ದಾರೆ. "ಇನ್ನೊಬ್ಬರ ದುರಾದೃಷ್ಟವನ್ನು ಕಂಡು ನಾವು ನಗುತ್ತೇವೆ, ನಮ್ಮನಗೆಯು ನಾವು ಹೆಚ್ಚಿನವರು ಎಂಬ ಕ್ಷಿಪ್ರ ಭಾವನೆಯ ಹೆಗ್ಗಳಿಕೆಯ ಕಾರಣ ಹೊರಹೊಮ್ಮುವ ಅನಿರೀಕ್ಷಿತ ಫನತೆ" ಎಂದು ಹೋಬ್ಸ್ ಎಂಬವರು ಹೇಳಿದ್ದಾರೆ. ಇವರಿನ್ನುವಂತೆ ಕೆಲವು ನಗೆಗಳಲ್ಲಿ ಈ ಅಂಶ ಇಲ್ಲವೇ ತಾನು ಹೆಚ್ಚು ಎಂಬ ಸುಳಿವು ಇರಬಹುದಾದರೂ ಎಲ್ಲಾ ನಗುವಿನಲ್ಲಿ ಅದಿರಲಾರದು. ಆದ್ದರಿಂದಲೇ ಸಲ್ಲಿ ಎಂಬವರು "ಅದೊಂದು ಆಟ" ಎಂದಿದ್ದಾರೆ. ಆದರೆ ಆಟವೆಂದರೇನು? ಎಲ್ಲಾ ನಗುಗಳು ಆಟವಾಗಲಾರವು. ಪ್ರಸಿದ್ಧ ವಿಜ್ಞಾನಿ ಬರ್ಗ್‌ಸನ್ ಎಂಬವರು 'ನಗುವೆಂಬುದು ಮಾನವನ ಜೀವನದಲ್ಲಿ ಯಾಂತ್ರಿಕ ರೀತಿಯಲ್ಲಿ ಹೆಪ್ಪು ಗಟ್ಟಿದ ಅನಿಷ್ಟ ಪರದೆಯನ್ನು ಒಡೆಯುವ ಸಾಧನ. ಈ ರೀತಿ ಆ ಹೆಪ್ಪನ್ನು ಒಡೆದು ಮನುಷ್ಯನಿಗೆ ತುಕ್ಕು ಹಿಡಿಯದಂತೆ ಮಾಡಿ ಅತನಿಗೆ ಹೊಸ ಚೇತನವನ್ನು ಕೊಡುವ ವಸ್ತು" ಎಂದು ಹೇಳಿದ್ದಾರೆ.

ಮಾನವನಲ್ಲಿ ನೈಸರ್ಗಿಕವಾಗಿರುವ ಆದರೆ ನಾಗರೀಕ ಸಮಾಜದ ಕಟ್ಟುನಿಟ್ಟುಗಳಿಂದ ಒತ್ತಿ ಹಿಡಿಯಲ್ಪಟ್ಟ ಭಾವನೆಗಳು ಹಾಸ್ಯಕ್ಕೆ ಎಡೆಕೊಡುವವು. ಹಾಸ್ಯವು ನಗುವನ್ನು ಪ್ರಚೋದಿಸುವದು. ಆದ್ದರಿಂದ ಲೈಂಗಿಕ ವಿಚಾರಗಳಲ್ಲಿ ಹೆಚ್ಚಿನ ಹಾಸ್ಯಕ್ಕಡೆಯೂಗುವದಾಗಿದೆ! ಏಕೆಂದರೆ ಲೈಂಗಿಕ ವಿಚಾರಗಳಷ್ಟು ಹೆಚ್ಚಾಗಿ ಸಮಾಜದಲ್ಲಿ ಒತ್ತಿ ಹಿಡಿಯಲ್ಪಟ್ಟ ವಿಷಯಗಳು ಬೇರಿಲ್ಲ. ಆದ್ದರಿಂದ ಫ್ರಾಯ್ಡ್ ಎಂಬ ಮನಶಾಸ್ತ್ರಜ್ಞರು ಹೀಗೆ ಹೇಳಿರುವರು. "ಭಾವನೆಯು ವಿನಿಯೋಗದ ಕಾರಣವಾಗಿ ಹಾಸ್ಯದ ಸಂತೋಷವೂ ಯೋಚನೆಯು ನಿರ್ವ್ಯಯದ ಕಾರಣ ಜಾಣ್ಮೆಯು ಆನಂದವೂ ಹುಟ್ಟುತ್ತವೆ" ಈ ಎರಡು ಪ್ರಸಂಗಗಳಲ್ಲೂ ನಗುವು ಹೆಚ್ಚಾದ ಚೇತನವನ್ನು ಹೊರಚೆಲ್ಲುವ ಸಾಧನವಾಗಿದೆ.

ಮಾನವನಲ್ಲಿ ನೈಸರ್ಗಿಕ ಸಹಾನುಭೂತಿಯನ್ನು ಆಹ್ವಾನಿಸುವ ಹೃದಯರಸ ವಿರಸವು ನಗುವನ್ನು ಪ್ರಚೋದಿಸುತ್ತದೆ. ಮನುಷ್ಯನ ಜೀವನದಲ್ಲಿ ಅನೇಕ ಚಿಕ್ಕ ಅಕಸ್ಮಿಕಗಳಿರುತ್ತವೆ. ಅವುಗಳಿಗೆ ಪರಿಹಾರ ಒದಗಿಸುವುದು ಕಷ್ಟ. ಅಂಥಾವುಗಳಿಗೆ ನಗುವಿನ ಮಾರ್ಗವೇ ಪರಿಹಾರ ಮಾರ್ಗ. ಮೆಕ್‌ಡುಗಲ್ ಎಂಬವರು ಹೇಳುವ ಈ ತರ್ಕವು ಎಲ್ಲಾ ಸಮಯದಲ್ಲಿ ಸರಿಹೋಗದು. ಯಾವ ಬಹಿರ್ವಿಚಾರಗಳನ್ನೂ ತಿಳಿಯದ ಮಗುವಿನ ನಗುವಿಗೆ ಅರ್ಥವನ್ನು ಈ ವಿವರಣೆ ಕೊಡಲಾರದು. ಆದ ಕಾರಣ ನಗುವಿನ ವಿಶಿಷ್ಟ ವೈಶಿಷ್ಟ್ಯಗಳನ್ನು ನಾವು ಪರಿಶೀಲಿಸಬೇಕಾಗುವದು.

ನಗಲು ಕಾರಣಗಳಿರುತ್ತವೆ. ಯಾವದೇ ಪ್ರಚೋದನೆ ಇದ್ದರೂ ಒಬ್ಬನು ಇನ್ನೊಬ್ಬನ ಸೃಜನೆಯಿಂದಾಗಿ, ವಿನಯ ಪ್ರದರ್ಶನಕ್ಕಾಗಿ, ಇನ್ನೊಬ್ಬನನ್ನು ಕಡೆಗಣಿಸಲಿಕ್ಕಾಗಿ, ತನ್ನ ಮೌಢ್ಯತೆಯನ್ನೇ ನೆನೆದವನಾಗಿ ನಗಾಡುತ್ತಾನೆ. ಆಟದ ಆನಂದದ ಕಾಲದಲ್ಲಿ ನಗುವಿನ ಅಗತ್ಯತೆ ಇರದಿದ್ದರೂ ನಗುವಿಲ್ಲದಿದ್ದರೆ ಆಟ ರುಚಿಸಲಾರದು. ಮುಗುಳು ನಗೆಗೂ ನಗುವಿಗೂ ವ್ಯತ್ಯಾಸವಿದೆ. ಮುಗುಳು ನಗೆ ಆತ್ಮೀಯವಾದುದು. ಅದು ನಗುವವನಿಗೆ ಮಾತ್ರ ಪರಿಮಿತವಾದುದು. ಆದರೆ ನಗೆಯು ಬಹಿರಂಗವಾದುದು. ಶಿಶುವು ನಗೆಯನ್ನು ಕಲಿಯುವ ಎರಡು ತಿಂಗಳಿಗೆ ಮೊದಲೇ ಮುಗುಳು ನಗೆಯನ್ನು ಕಲಿಯುತ್ತೆ. ನಗೆಯು ಇನ್ನೊಬ್ಬನನ್ನು ನಗಿಸಬಹುದು. ಇನ್ನೊಬ್ಬನಿಗೆ ದುಃಖಕ್ಕೆ ಕಾರಣವಾಗಿಬಹುದು. ಇಲ್ಲವೇ ಸಿಟ್ಟಿಗೇರಿಸಬಹುದು. ಆದರೆ ಮುಗುಳುನಗೆಯು ಹಾಗಲ್ಲ. ಯಾರಿಗೂ ಅದರಿಂದ-ಹಾನಿಯಾಗದು. ಅದು ಅಂತರಿಕವಾದುದು. ಬಹಿರಂಗವಾದುದಲ್ಲ.

ಎಲ್ಲಾ ನಗೆಗಳಿಗೂ ಅರ್ಥವಿರಲಾರದು. "ಲಾಫಿಂಗ್ ಗೇಸ್" ಎಂಬುದನ್ನು ಮೂಸಿದರೆ ನಗುವು ಬರುತ್ತದೆ. ಹಿಡಿತವಿಲ್ಲದ ಈ ನಗುವಿನಲ್ಲಿ ಅರ್ಥವಿರಲಾರದು. ನಗುವು ಸಾಮಾಜಿಕವಾದುದು. ಒಬ್ಬನೇ ಏಕಾಂಗಿಯಾಗಿರುವಲ್ಲಿ ನಗುವಿರಲಾರದು. ಮಹಾಕವಿ ಬೈರನ್ ಹೇಳಿದಂತೆ "ನಾನು ಯಾವದೇ ಮನುಜನನ್ನು ನೋಡಿ ನಗುವದಾದರೆ ಅತನನ್ನು ನೋಡಿ ಅಳಬಾರದೆಂಬ ಕಾರಣದಿಂದ." ನಗುವು ಮತ್ತು ಅಳು ಇವೆರಡು ಒಂದೇ ನಾಣ್ಯದ ಎರಡು ಬದಿಗಳಂತೆ! ಆದ್ದರಿಂದಲೇ "ಏ ರೋನೆವಾಲೆ ಹಸನೆ ಕಿ ದಿನ್ ದೂರ್ ನಹೀ ಹೈ" ಎಂದು ಹಾಡಿರಬೇಕು.

ಈ ಮೇಲಿನ ವಿವರಣೆಗಳಿಂದ ನಗುವೆಂಬುದು ಶರೀರದ ಯಾ ಮನಸ್ಸಿನ ಯಾವುದೋ ಒಂದು ಬಿಗುವಿನ ಸ್ಫೋಟನ. ಈ ಸ್ಫೋಟನ ಯಾವಾಗ, ಎಂಥಾ ಸನ್ನಿವೇಶದಲ್ಲಾಗುವದೆಂದು ನಿರ್ದಿಷ್ಟವಾಗಿ ಹೇಳಲಾಗದು ಆದರೆ ಜನಜೀವನದಲ್ಲಿ ನಗೆಯು ಅತೀ ಅವಶ್ಯ. ಗಾಳಿ ನೀರುಗಳಂತೆಯೇ ಮಾನವನ ಜೀವನದಲ್ಲಿ ಇದಕ್ಕೆ ಪ್ರಾಮುಖ್ಯ ಪಾತ್ರವಿದೆ. ಜೀವನವು ಹಗುರವಾಗಬೇಕಾದರೆ ಬಾಳು ಗೋಳಾಗದೆ ಉಳಿಯಬೇಕಾದರೆ ನಗುವಿನ ಸಂಜೀವಿನಿ ಬೇಕು. ನಗುವು ಮನುಷ್ಯನಿಗೆ ದೇವರು ಕೊಟ್ಟಿರುವ ಅತ್ಯಮೂಲ್ಯ ವರಪ್ರಸಾದ. ಮಾನವ ಸಮಾಜಕ್ಕೆ ಸೋಡುಮುಖ ಸಲ್ಲದು. ನಕ್ಕು ನಲಿಯಬೇಕು. ನೆರೆಯವರನ್ನೂ ನಗಿಸಬೇಕು. ಇಷ್ಟಕ್ಕೇ ವಿವೇಕಾನಂದರು "When we are the Children of immortal bliss, why should we be mo[illegible] ಅಮರ ಆನಂದದ ಮಕ್ಕಳು ನಾವೇಕೆ ಬಾಡಿದ ಮುಖ ಎಂದು ಕೇಳಿದ್ದಾರೆ.

"Laugh and grow
ಚಳುವಳಿ ಇದೆಯಂತೆ. ಆ[illegible]
ಆರೋಗ್ಯವಂತರಾಗಿರೀ' [illegible]
ಅವರ ಸಿದ್ಧಾಂತ.
ಶಾರೀರಿಕ ಆರೋಗ್ಯಕ್ಕೆ
ಸಹಕಾರಿಯಲ್ಲ. ಸಮಾಜದ[illegible]
ಗೂ, ವ್ಯಕ್ತಿ ವ್ಯಕ್ತಿಗಳೊಳಗಿನ
ಕ್ಕೂ ರಾಮಬಾಣದಂತೆ. ಈ [illegible]
ಲ್ಯ ವಸ್ತುವನ್ನು ಪ್ರತಿಯೊಬ್ಬನೂ ಕರಗತ[illegible]
ಮಾಡಿಕೊಳ್ಳಬೇಕು. ನಗುವಿನ ಸ್ಪರ್ಶದಿಂದ ವಿರಸ ಸರಸವಾಗುವದು. ಆದ್ದರಿಂದಲೇ ಸರ್ವಜ್ಞನೂ ಹೀಗೆ ಹೇಳಿರಬೇಕು.

ಸ್ವಾತಿಯೂ ಹನಿಬಿದ್ದು
ಜಾತಿ ಮುತ್ತಾದಂತೆ
ಸಾತ್ವಿಕನ ಜೀವ-ಹಗುರಾಂಗಿ ಹಗುವಿಂದ
ಜ್ಯೋತಿಯಂತಕ್ಕುಂ-ಸರ್ವಜ್ಞ.

ತಿದ್ದು ಪಡಿ.

ಕಳೆದ ವಾರ 'ಕೊಡಗು ವಿದ್ಯಾರ್ಥಿ ಕಾಂಗ್ರೆಸ್ ಉತ್ತರಿಸಲಿ' ಎಂಬ ಪತ್ರದಲ್ಲಿ ಲಾರಿ ನಂಬರು ೫೧೯ ಎಂಬುದು ೬೧೯ ಎಂದು ತಪ್ಪಾಗಿ ಪ್ರಿಂಟಾಗಿದೆ. ವಾಚಕರು ತಿದ್ದಿ ಓದಿಕೊಳ್ಳಬೇಕು.

ಸಂ.]

ಕೊಡಗು

ತಾ. ೩೧-೩-೧೯೫೦ನೇ ಶುಕ್ರವಾರ

ಜಿಲ್ಲಾ ಬೋರ್ಡಿನ ವಿದ್ಯಾ ಇಲಾಖೆ.

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಇಟ್ಟುಕೊಳ್ಳಬೇಕೋ ಯೂ ಬೇಡವೋ ಎಂಬ ಪ್ರಶ್ನೆ ಎದ್ದಿದೆ. ಈ ವಿಚಾರ ಅಲ್ಲಲ್ಲಿ ಅಧಿಕೃತ ಅಲೋಚನೆಗಳೂ ಚರ್ಚೆಗಳೂ ನಡೆಯುತ್ತಿದ್ದರೂ ಯಾವುದೊಂದು ನಿಶ್ಚಿತ ತೀರ್ಮಾನವಾಗಿರುವದಿಲ್ಲ. ಹೇಗೂ ಇತರ ಪ್ರಾಂತಗಳಲ್ಲಿ ಈ ಸಂಸ್ಥೆಗಳು ತತ್ಕಾಲ ನಿಲ್ಲಿಸಲ್ಪಡದೆ ಬಲಪಡಿಸಿ ಮುಂದುವರಿಸಲ್ಪಡುವಂಥಾ ಚಿಹ್ನೆಗಳೇ ಕಂಡುಬರುತ್ತವೆ. ಕೊಡಗಿನಲ್ಲಿ ಇನ್ನೂ ಜವಾಬ್ದಾರಿ ಸರಕಾರ ಸ್ಥಾಪಿಸಲ್ಪಟ್ಟಿರುವದಿಲ್ಲ ಜವಾಬ್ದಾರಿ ಸರಕಾರ ಸ್ಥಾಪಿತವಾಗುವ ವರೆಗೆ ಸ್ಥಳೀಯ ಸಂಸ್ಥೆಗಳ ಮುಂದಿನ ಸ್ಥಿತಿಯನ್ನು ಆಲೋಚಿಸುವ ಅವಶ್ಯಕತೆಯೇ ಇಲ್ಲ. ಜನರ ಸರ್ಕಾರವು ಸ್ಥಾಪಿತವಾದ ಮೇಲೆ ಈ ಪ್ರಶ್ನೆಯನ್ನು ವಿಮರ್ಶಿಸಬಹುದಾಗಿದೆ.

ಸ್ಥಿತಿಯು ಹೀಗಿರುವಲ್ಲಿ ಇಲ್ಲಿಯ ಸಂಸ್ಥೆಗಳಾದ ಜಿಲ್ಲಾ ಬೋರ್ಡು ಎಂದಿನಂತೆ ನಡೆಯುತ್ತಿತ್ತು. ಮಡಿಕೇರಿ ಮತ್ತು ವೀರಾಜಪೇಟೆ ಮುನ್ಸಿಪಾಲಿಟಿಗಳು ಬಾಗೆಯ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಪಟ್ಟಣಗಳನ್ನು ಕುರಿತು ಶ್ರಮಿಸುತ್ತಿವೆ. ಆದರೆ ಇವುಗಳಲ್ಲಿ ವಿದ್ಯಾ ವಿಭಾಗವು ಕಡಿಮೆಯಾಗಿವೆ. ಜಿಲ್ಲೆಯ ಪ್ರಾಮುಖ್ಯ ಇಲಾಖೆಯಾದ ವಿದ್ಯಾ ಇಲಾಖೆಯಾಗಿದೆ. ಇದರ ಕಾರಣವು ಕಾರ್ಯವು ಸರಕಾರಿ ಅಧಿಕಾರಿಗಳಿಂದಲೇ ನಡೆಸಲ್ಪಡುತ್ತಿದೆ. ಆದರೆ ಆರ್ಥಿಕ ವಿಷಯ ಆಡಳಿತ ಜವಾಬ್ದಾರಿಯು ಬೋರ್ಡಿನ ಕೈಯಲ್ಲಿದೆ. ಎರಡನೆಯದಾಗಿ ವೈದ್ಯಕೀಯ ಇಲಾಖೆಯು ಸ್ವಲ್ಪವಷ್ಟಿನ ಜವಾಬ್ದಾರಿ ಮಾತ್ರ ಬೋರ್ಡಿನಲ್ಲಿದ್ದು ಹೆಚ್ಚಿನ ಹೊರೆಯು ಸರಕಾರದ ವೈದ್ಯಕೀಯ ಇಲಾಖೆಯಲ್ಲಿದೆ. ಮೂರನೆಯದಾಗಿ ಗ್ರಾಮಾಂತರ ರಸ್ತೆಗಳ ಆಡಳಿತವು ಮಾತ್ರ ಸಂಪೂರ್ಣ ಜಿಲ್ಲಾ ಬೋರ್ಡಿನಲ್ಲಿದೆ. ಹೀಗಿರುವಲ್ಲಿ ಪ್ರಾಮುಖ್ಯವಾದ ವಿದ್ಯಾ ಇಲಾಖೆಯನ್ನು ಸಂಪೂರ್ಣವಾಗಿ ಸರಕಾರಕ್ಕೆ ವಹಿಸಿ ಬಿಡಬೇಕೆಂಬ ಅಲೋಚನೆಗೆ ಅವಕಾಶವಿದೆಯೇ ಎಂದು ನೋಡಬೇಕಾಗಿದೆ. ಸರಕಾರಿ ಶಾಲೆಗಳ ಉಪಾಧ್ಯಾಯರುಗಳಿಗೆ ಪೇ ಕಮಿಷನ್ನಿನ ಶಿಫಾರಸ್ಸಿನ ಮೇರೆ ಹೆಚ್ಚಿನ ವೇತನ ಕೊಟ್ಟ ಅವರಂತೆಯೇ ಶ್ರಮಿಸುತ್ತಿರುವ ಸ್ಥಳೀಯ ಸಂಸ್ಥೆಗಳ ಉಪಾಧ್ಯಾಯರುಗಳಿಗೆ ಯಾವುದಕ್ಕೆ ಹಿಂದಿನ ದರದ ಸಂಬಳವನ್ನೇ ಕೊಡುತ್ತಿರುವ ಕಾರಣ ಅವರಲ್ಲಿ ಬಹುಪಾಲು ಅತೃಪ್ತಿಯುಂಟಾಗಿರುವದು ಸಹಜವಾಗಿದೆ. ಈ ಕೊರತೆಯನ್ನು ನೀಗಿದಲ್ಲಿ ಬೋರ್ಡಿನ ಕ್ರಮವು ದಕ್ಷವೇತರ ಯಿಂದ ನಡೆಯುತ್ತಿಲ್ಲವೆಂಬುದರಲ್ಲಿ ಸಂಶಯವಿಲ್ಲ. ಈ ತೊಂದರೆಯನ್ನರಿತೇ ಜಿಲ್ಲಾ ಬೋರ್ಡಿನವರು ತಮ್ಮ ಆದಾಯದಿಂದ ಈ ಹೆಚ್ಚಿನ ಖರ್ಚನ್ನು ನಿರ್ವಹಿಸಲಾರದೆ ಹೆಚ್ಚಿನ ಧನ ಸಹಾಯಕ್ಕೆ ಸರಕಾರದಲ್ಲಿ ವಿನಂತಿ ಮಾಡುತ್ತಿರುವದಾಗಿದೆ. ಇವರ ಕೋರಿಕೆಯಂತೆಯೇ ಸರಕಾರದವರು ಬೋರ್ಡಿನ ಸಿಬ್ಬಂದಿಗಳ ತುಟ್ಟಿಭತ್ಯವನ್ನು ಸಂಪೂರ್ಣ ಕೊಡಲು ಒಪ್ಪಿದ್ದಾಗಿದೆ. ಆದರೆ ವೇತನದ ದರವನ್ನು ಹೆಚ್ಚಿಸಲು ಹೆಣ ಸಹಾಯವನ್ನು ಇನ್ನೂ ನಿಶ್ಚಯಿಸಿರುವುದಿಲ್ಲ. ಈ ಕಾರಣ ಹೆಚ್ಚು ಖರ್ಚು ತಗಲುವ ಹೈಯರ್ ಎಲಿಮೆಂಟರಿ ಶಾಲೆಗಳ ಜವಾಬ್ದಾರಿಯನ್ನು ಸಂಪೂರ್ಣ ಸರಕಾರಕ್ಕೆ ಬಿಟ್ಟುಕೊಡುವಂತೆ ಬೋರ್ಡಿನವರು ತೀರ್ಮಾನಿಸಿರುವರೆಂದು ತಿಳಿಯುಬರುತ್ತದೆ. ಇದರಿಂದಲೂ ಈ ಬಿಕ್ಕಟ್ಟಿನ ಸಮಸ್ಯೆಯು ಬಗೆಹರಿಯಲಾರದೆಂಬ ಕಾರಣದಿಂದಲೋ ಏನೋ ಪ್ರಾಥಮಿಕ ಶಾಲೆಗಳನ್ನೂ ಕೂಡ ಅಂದರೆ ಪೂರ್ತಿ ವಿದ್ಯಾ ಇಲಾಖೆಯನ್ನೇ ಸರಕಾರಕ್ಕೆ ವಹಿಸಿಬಿಡಬೇಕೆಂಬ ಅಭಿಪ್ರಾಯ ಹುಟ್ಟಿದ್ದಾಗಿದೆ. ಇದಕ್ಕಾಗಿ ಕಳೆದ ತಾ. ೧೯ ರಲ್ಲಿ ಬೋರ್ಡಿನ ಒಂದು ವಿಶೇಷ ಸಭೆಯು ಕೂಡ ಏರ್ಪಡಿಸಲ್ಪಟ್ಟಿತ್ತು. ಆದರೆ ಅಂಥಾ ಮಹತ್ವದ ಪ್ರಶ್ನೆಯನ್ನು ಬಹು ಅಲ್ಪ ಸಮಯದಲ್ಲಿ ಅರುವಿಕೆಯಿಂದ ಕೂಡಿಸಿದಂಥಾ ವಿಶೇಷ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವದರಲ್ಲಿ ಉಚಿತವಲ್ಲವೆಂದು ನೆರೆದಿದ್ದ ಬೋರ್ಡಿನ ಮೆಂಬರುಗಳು ಬಹುಮತದಿಂದ ತೀರ್ಮಾನಿಸಿದ್ದು ಯೋಗ್ಯವಾಗಿದೆ. ಇಂಥಾ ಮಹತ್ವದ ವಿಚಾರವನ್ನು ದೇಶೀಯರ ಅಭಿಪ್ರಾಯವನ್ನು ಒಂದಲ್ಲೊಂದು ರೀತಿಯಲ್ಲಿ ತೆಗೆದು ದೀರ್ಘ ಪರ್ಯಾಲೋಚನೆಯಿಂದ ತೀರ್ಮಾನಿಸಬೇಕಾಗಿದೆ. ಏಕೆಂದರೆ ಈ ಪ್ರಾಮುಖ್ಯ ಇಲಾಖೆಯು ಬೋರ್ಡಿನ ಕೈ ತಪ್ಪಿದರೆ ಬೋರ್ಡಿನ ಅಸ್ತಿತ್ವದ ಅವಶ್ಯಕತೆಗೆ ಅರ್ಹವಾದಷ್ಟು ಬೇರೆ ಕೆಲಸಗಳು ಇರುವವೋ ಎಂಬುದು ಸಂಶಯದ ಮಾತಾಗಿದೆ. ಅಂದಮಾತ್ರಕ್ಕೆ ಉಪಾಧ್ಯಾಯರುಗಳ ಸಿಟಿಯನ್ನು ಉತ್ತೇಜಗೊಳಿಸಬಾರದೆಂದಲ್ಲ. ವಿದ್ಯಾ ಇಲಾಖೆಯನ್ನು ಸಂಪೂರ್ಣವಾಗಿ ಸರಕಾರದವರು ವಹಿಸಿಕೊಂಡಿದ್ದೇ ಆದರೆ ಉಪಾಧ್ಯಾಯರುಗಳಿಗೆಲ್ಲ ಪೇ ಕಮಿಷನ್ ದರದ ಮೇರೆ ಹೆಚ್ಚಿನ ಸಂಬಳ ಕೊಡಬೇಕಾಗುವದು ಮಾತ್ರವಲ್ಲ; ಎಲ್ಲಾ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನೆಲ್ಲಾ ಉತ್ತಮ ರೀತಿಗೆ ತರಬೇಕಾಗುವದು. ಇದಕ್ಕಾಗಿ ಸರಕಾರವು ದೊಡ್ಡ ಮೊತ್ತವನ್ನು ವೆಚ್ಚ ಮಾಡಬೇಕಾಗಿದೆ. ಸರಕಾರವು ವಹಿಸಿಕೊಂಡ ನಂತರ ಈಗ ದೊರೆಯುವಂತೆ ಕಟ್ಟಡಗಳಿಗಾಗಿ ಗ್ರಾಮಸ್ಥರ ಸಹಾಯವು ನುಂಬರಲಾರದು. ಅಲ್ಲದೆ ಹೆಚ್ಚು ವಿದ್ಯಾರ್ಥಿಗಳಿಲ್ಲದ ಚಿಕ್ಕ ಚಿಕ್ಕ ಶಾಲೆಗಳನ್ನು ಸರಕಾರದವರು ಮುಚ್ಚಬೇಕಾಗುವದು. ಸಾಕಷ್ಟು ವಿದ್ಯಾಯೋಗ್ಯತೆ ಇಲ್ಲದ ಉಪಾಧ್ಯಾಯರುಗಳನ್ನು ವಜಾಮಾಡಬೇಕಾಗುವದು. ತೊಂದರೆಗಳು ಬಾರದಂತೆ ಮಾಡಲು ಪ್ರಾಥಮಿಕ ಶಾಲೆಗಳನ್ನೆಲ್ಲಾ ಬೋರ್ಡಿನಲ್ಲೇ ನಡೆಸುತ್ತಾ ಬಂದು ಆದರ ಖರ್ಚಿನ ಬಗ್ಗೆ ಯೋಗ್ಯವಾದ ಅಂದರೆ ನೆರೆಪ್ರಾಂತವಲ್ಲಿರುವಂತೆ ಮೂರರಲ್ಲಿ ಎರಡರಷ್ಟು ವಂತಿಗೆಯನ್ನು ಸರಕಾರದಿಂದ ಪಡೆಯುವದು ಯುಕ್ತವಾಗಿದೆ. ಇಡೀ ವಿದ್ಯಾ ಇಲಾಖೆಯನ್ನೇ ವಹಿಸಿಕೊಂಡು ಅದರ ಸಂಪೂರ್ಣ ಖರ್ಚು ನಡೆಸಲು ಸರಕಾರವು ಸಿದ್ದವಿರುವದಾದರೆ ಹೆಚ್ಚಿನ ಖರ್ಚನ್ನು ಬೋರ್ಡಿಗೆ ವಂತಿಗೆಯಾಗಿ ಕೊಡುವದರಲ್ಲಿ ಸರಕಾರಕ್ಕೆ ತೊಂದರೆ ಏನೂ ಉಂಟಾಗಲಾರದು. ಸರಕಾರವು ಸಂಪೂರ್ಣ ಖರ್ಚು ಮಾಡುವದರ ಬದಲು ಬೋರ್ಡಿಗೆ ಮೂರರಲ್ಲಿ ಎರಡರಷ್ಟು ವಂತಿಗೆ ಕೊಟ್ಟರೆ ಸಾಕಾಗುವದು. ಈ ವಂತಿಗೆಯನ್ನು ಬೋರ್ಡಿನವರು ತಮ್ಮ ಹಣದೊಂದಿಗೆ ಸೇರಿಸಿ 'ಉಪಾಧ್ಯಾಯರುಗಳ ವೇತನ ದರವನ್ನು ಯೋಗ್ಯ ಮಟ್ಟಕ್ಕೆ ಏರಿಸಲು ಸಾಧ್ಯವಾಗುವದು. ಈ ರೀತಿಯನ್ನು ಕೈಕೊಂಡದ್ದಾದರೆ ಸರಕಾರವು ಇದಕ್ಕಾಗಿ ಮಾಡಬೇಕಾದ ಖರ್ಚು ಸ್ವಲ್ಪ ಕಡಿಮೆಯಾಗುವುದಲ್ಲದೆ ಬೋರ್ಡಿನವರು ವಿದ್ಯಾ ಇಲಾಖೆಯನ್ನು ತಮ್ಮ ಆಡಳಿತದಲ್ಲೇ ಇಟ್ಟುಕೊಂಡು ಉಪಾಧ್ಯಾಯರುಗಳ ವೇತನವನ್ನು ಹೆಚ್ಚಿಸಿ ಅವರಲ್ಲಿ ಉಂಟಾಗಿರುವ ಅತೃಪ್ತಿಯನ್ನು ಹೋಗಲಾಡಿಸಲು ಅನುಕೂಲವಾಗುವದು. ಹೇಗೂ ಈ ಪ್ರಾಮುಖ್ಯ ವಿಚಾರದಲ್ಲಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರುವ ಮುಂಚಿತವಾಗಿ ಇದಕ್ಕೆ ಸಂಬಂಧಿಸಿದ ಸರಕಾರಿ ಅಧಿಕಾರಿಗಳೂ, ಬೋರ್ಡಿನವರೂ ಮತ್ತು ದೇಶೀಯರೂ ದೀರ್ಘಾಲೋಚನೆ ಮಾಡುವರಾಗಿ ಆಶಿಸುತ್ತೇವೆ.

ವರ್ತಮಾನ.

ತಾರೀಕು ೨-೪-೫೦ ರಿಂದ ಪ್ರತಿ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾಥಮಿಕದಿಂದ ವಿಶಾರದವರೆಗೆ ಹಿಂದೀ ತರಗತಿಗಳು ತೆರೆಯಲ್ಪಡುವವು.

ಇಂಡಿಯಾ ಸರಕಾರದ ಹೊಸ ಸೈಪುಟ್ಯೂಬು ಮತ್ತು ಫಿಟ್ಟಿಂಗ್ ವಿತರಣಾ ಯೋಜನೆಯಂತೆ, ಉಪಯೋಗಿಸುವವರು ಮತ್ತು ವ್ಯಾಪಾರಸ್ಥರು ಮುಂದಿನ ಜನವರಿ, ಮಾರ್ಚಿಗೆ ಬೇಕಾದುದಕ್ಕೆ ಸೆಪ್ಟಂಬರ್ ೩೦ ರ ಒಳಗೂ, ಏಪ್ರಿಲ್-ಜೂನ್‌ಗೆ ಬೇಕಾದುದಕ್ಕೆ ಡಿಸೆಂಬರ್ ೩೧ ರ ಒಳಗೂ, ಜುಲೈ-ಸೆಪ್ಟಂಬರಿಗೆ ಬೇಕಾದುದಕ್ಕೆ ಮಾರ್ಚಿ ೩೧ ರ ಒಳಗೂ, ಅಕ್ಟೋಬರ್-ಡಿಸೆಂಬರಿಗೆ ಬೇಕಾದುದಕ್ಕೆ ಜೂನ್ ೩೦ ರ ಒಳಗೂ, ಚೀಫ್ ಕಮಿಷನರ ಆಫೀಸಿನಲ್ಲಿ ದೊರೆಯುವ ನಿಶ್ಚಿತ ಫಾರ್ಮುಗಳಲ್ಲಿ ಅರ್ಜಿ ಬರಕೊಳ್ಳಬಹುದೆಂದು ತಿಳಿಯುತ್ತಾರೆ.

ಉಪಯೋಗಿಸಿದ ಸಾರಾಯಿ ಕಾಲಿ ಕುಪ್ಪಿಗಳನ್ನು ಸರಕಾರಿ ಸಾರಾಯಿ ಡಿಪೋಗಳಲ್ಲಿ ಕುಪ್ಪಿಗೆ ನಾಲ್ಕಾಣೆ ದರದಲ್ಲಿ ಪಡಕೊಳ್ಳುವರೆಂದೂ ಇವುಗಳನ್ನು ಸೀಮೆಣ್ಣೆ ಹಾಕಲು ಉಪಯೋಗಿಸಿರಬಾರದೆಂದೂ ಸರಕಾರ ಪ್ರಕಟಿಸಿದೆ.

ಕೊಡಗು ಶಾಸನ ಸಭೆಯು ಬಡ್ಜೆಟ್ ನೋಟಿಂಗನ್ನು ತಾ. ೨೯-೩-೫೦ ರಿಂದ ೧೭-೪-೫೦ ರ ವರೆಗೆ ಮುಂದರಿಸಲಾಗಿದೆ. ಬಡ್ಜೆಟ್ಟಿನ ಮೇಲೆ ತೀರ್ಮಾನಗಳನ್ನು ತಾ. ೫ ರ ವರೆಗೆ ಕಳುಹಿಸಬಹುದಾಗಿದೆ.

ಕೊಡಗಿನ ಹೊಸ ಚೀಫ್ ಕಮಿಷನರ್ ರಾದ ಲೆ. ಕ. ದಯಾಸಿಂಗ್ ಬೇಡಿಯವರು ಪ್ರಮಾಣವಚನ ಸ್ವೀಕರಿಸುವ ಸಮಾರಂಭಕ್ಕಾಗಿ ಏರ್ಪಡಿಸಿದ ದರ್ಬಾರು ತಾ. ೨೯ ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ಕೊಡಗಿನ ಜಿಲ್ಲಾ ಜಡ್ಜರು ಪ್ರಮಾಣವಚನ ಮಾಡಿಸಿದರು.

ಕೊಡಗು ಪೊಲೀಸ್ ಇಲಾಖೆಗೆ ಪ್ರಾಯ ೧೮ ರಿಂದ ೨೫ ರ ವಳಗೆ ಇದಕ್ಕೆ ಜೆನ್ನಾಗಿ ಓದು ಬರೆಯಲು ಬಲ್ಲ ದೃಢಕಾಯರಾದವರು ಬೇಕಾಗಿರುವರು. ಸೇರಲು ಇಚ್ಛೆಯುಳ್ಳವರು ಮಡಿಕೇರಿಯಲ್ಲಿರುವ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿಗೆ ಏಪ್ರಿಲ್ ತಾ. ೬ ರ ಮೊದಲು ಖುದ್ದಾಗಿ ಹೋಗಿ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು.

ಮದ್ರಾಸ್ ಸರಕಾರದಲ್ಲಿ ಡಿವಿಜನಲ್ ಇಂಜಿನಿಯರಾಗಿರುವ ಶ್ರೀ ಚಿಲ್ಕಿಂದಿರ ಸುಬ್ಬಯ್ಯನವರನ್ನು ಕೇಂದ್ರ ಸರಕಾರದ ಸಾರಿಗೆ (ಟ್ರಾನ್ಸ್‌ಪೋರ್ಟ್) ಇಲಾಖೆಗೆ ತಾತ್ಕಾಲಿಕ ಡಿವಿಜನಲ್ ಇಂಜಿನಿಯರಾಗಿ ವರ್ಗಾಯಿಸಲಾಗಿದೆ.

ಕೊಡಗಿನ ಪಶ್ಚಿಲರುಗಳ ಸಂಘದ ವಾರ್ಷಿಕ ಸಭೆಯು ಕೊಡಗಿನ ಸಹಕಾರ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಈ ತಾ ೯ ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯುವದು.

ತಾ. ೨೨-೩-೫೦ ರಲ್ಲಿ ಕಾರ್ಗುಂದದಲ್ಲಿ ಶ್ರೀ ನಾಟೋಳಂಡ ಕಾರ್ಯಪ್ಪನವರು ಮರದ ಕೊಂಬೆ ಕಡಿಯುತ್ತಿದ್ದಾಗ ಮರದಿಂದ ಬಿದ್ದು ಸತ್ತರೆಂದು ತಿಳಿದು ಬಂದಿದೆ

ವಾರ್ತೆಗಳು.

ಪೂರ್ವ ಬಂಗಾಲದಲ್ಲಿ ನಡೆಯುತ್ತಿರುವ ಅತ್ಯಮಾನುಷ ಹತ್ಯಾಕಾಂಡದ ಪ್ರತಿಕ್ರಿಯೆಯೋ ಎಂಬಂತೆ ಭಾರತದ ಪ್ರಮುಖ ನಗರಗಳಲ್ಲಿ ಅಲ್ಲಲ್ಲಿ ಜಾತೀಯ ಘರ್ಷಣೆಗಳು ಕಂಡುಬಂದಿವೆ. ಅಹ್ಮದಾಬಾದ್ ನಗರದಲ್ಲಿ ಚೂರಿಯ ತಿವಿತಗಳು ನಡೆದ ಸುದ್ದಿ ಕೇಳಿಸಿತು; ನಾಗಪುರದಲ್ಲಿಯೂ ಕೊಂಚ ಗಲಭೆ ನಡೆದಿದೆ; ಜಹಾನ್‌ಪುರದಲ್ಲಿ ಪರಿಸ್ಥಿತಿಯು ಇನ್ನಷ್ಟು ವಿಷಮತೆಗೆ ಮುಟ್ಟಿ ಗಲಭೆಯಲ್ಲಿ ಸುಮಾರು ೩೫ ಜನರು ಮಡಿದರು.

ಹಿಂದೂಗಳ ಮೇಲೆ ಮುಸ್ಲಿಂ ಆರೋಪ ಹೊರಿಸುವ ಉದ್ದೇಶವಿಟ್ಟುಕೊಂಡು ಮಸೀದಿಯ ಮೇಲೆ ಮುಸ್ಲೀಮರೇ ಬಾಂಬು ಬಿಸಾಡಿದ್ದು ಘಟನೆಯೊಂದು ಕಲ್ಕತ್ತಾ ಅಧಿಕಾರಿಗಳ ಅವಗಾಹನೆಗೆ ಬಂದು ಈ ಬಗ್ಗೆ ಐದು ಮಂದಿ ಮುಸ್ಲೀಮರನ್ನು ವಿಚಾರಣೆಗೊಳಪಡಿಸಲಾಗಿದೆ. ಹೌರಾಡಲ್ಲಿಯೂ ಅಂತಹ ಕೆಲವು ಘಟನೆಗಳು ನಡೆದ ಸಮಾಚಾರವಿದೆ.

ಓದುಗರ ಓಲೆಗಳು.

ವಿದ್ಯಾಧಿಕಾರಿಗಳಿಗೆ

೧೭ನೇ ತಾರೀಖಿನ 'ಕೊಡಗು'ವಿನಲ್ಲಿ ನೊಂದ ವಿದ್ಯಾರ್ಥಿನಿಯ ಸ್ವಾನುಭವದ ಪ್ರಶ್ನೆಗೆ ನಿಮ್ಮದೇನು ಉತ್ತರ? ಕೊಡಗಿನಲ್ಲಿರುವ ಈ ಎರಡು ಮೂರು ಸಂಸ್ಥೆಗಳು ಸಂಪೂರ್ಣ ಪರಮತ ಸಹಿಷ್ಣುಗಳೆಂದು ಹೇಳಲಾಗದಿದ್ದರೂ ಶೇಕಡ ೭೫ಕ್ಕಿಂತ ಹೆಚ್ಚಾಗಿ ಕ್ರಿಶ್ಚಿಯನೇತರರಿದ್ದರೂ ಇವರ ದೃಷ್ಟಿಯಂತೆ ವಿದ್ಯಾದಾನದ ಪೀಠದಲ್ಲಿ ಇಡೀ ವರ್ಷಕ್ಕೆ ಆರ್ಧ ಘಂಟೆಯಷ್ಟಾದರೂ ವಿದ್ಯಾದೇವಿಯನ್ನು ಪೂಜಿಸಲು ಆಸ್ಪದವಿಲ್ಲ. ದಿನಕ್ಕೆ ಮೂರು ಬಾರಿ ಕ್ರಿಶ್ಚಿಯನ್ ಬಾಲಕ ಬಾಲಕಿಯರು ಪ್ರಾರ್ಥಿಸಲೆಂದು, ಪ್ರಾರ್ಥಿಸುವಾಗ ಎದ್ದು ನಿಂತು ಆದರಿಸುವ ಪರಮತ ಸಹಿಷ್ಣುತೆಗೆ ಕೋರಿಸುವ ಪ್ರತೀಕಾರವಿದು!

ವರ್ಷಕ್ಕೆ ಅನಾವಶ್ಯವಾಗಿ ಹಲವಾರು ಬಾರಿ 'ಫಾದರ್ಸ್ ಬರ್ತ್ ಡೇ' 'ಮದರ್ಸ್ ಬರ್ತ್ ಡೇ' 'ಸ್ಕೂಲ್ ಪಾರ್ಟಿ' 'ಸೆಂಡ್ ಆಫ್' 'ಸ್ಕೂಲ್ ಡೇ' 'ಸ್ಕೂಲ್ ಬಿಲ್ಡಿಂಗ್ ಫಂಡ್' ಎಂದು ಆಗಾಗ್ಗೆ ದುಡ್ಡು ಕೇಳುತ್ತಲೇ ಇರುವರು. ಪರೀಕ್ಷೆಗಳೆಲ್ಲಾ ಅವರ ಸ್ವಂತ ಆವರಣದಲ್ಲಾದುದರಿಂದ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೂ ಮುಂದಕ್ಕೆ 'Push' ಮಾಡಬೇಕೆಂದು ಆಸೆಯಿರುವಂತ ಮಕ್ಕಳ ದುಡಿಯುವ ತಂದೆತಾಯಿಗಳು ಇವೆಲ್ಲವನ್ನೂ ಒದಗಿಸಿಕೊಡುತ್ತಿರುವರು. ಆದರೆ ತನ್ನ ಮಕ್ಕಳ ಪೋಷಣೆಗೆ ಗತಿಯಿಲ್ಲದ ತಂದೆ 'ಫಾದರ್ಸ್ ಬರ್ತ್ ಡೇ'ಗೆ ಹಣ ತರುವುದೆಲ್ಲಿಂದ?

ವಿದ್ಯಾಧಿಕಾರಿಗಳೇ, ಇಂತಹ ಧಾರ್ಮಿಕ ಮತ್ತು ಆರ್ಥಿಕ ಶೋಷಣೆಗಳನ್ನು ನಿಲ್ಲಿಸಲು ಹವಣಿಸುವಿರೇ? ಇವು ಸ್ವಂತ ಸಂಸ್ಥೆಗಳು, ಇವುಗಳ ಆಂತರಿಕ ಆಡಳಿತಕ್ಕೆ ಕೈಹಾಕಲು ನಮಗೆ ಸಂಬಂಧವಿಲ್ಲವೆಂದು ನೀವು ಅಥವ ಇನ್ನು ಬೇರೆ ಹುದ್ದೆಯವರು, ನಿಮ್ಮ ಮಕ್ಕಳು ಅಲ್ಲಿ ವಿದ್ಯೆ ಪಡೆಯುವಷ್ಟು ದಿನ ಹೇಳುತ್ತಿರಬಹುದು. ಆದರೆ ಈ ಸಂಸ್ಥೆಗಳು ಸರಕಾರದಿಂದ ಹಣ ಸಹಾಯ ಪಡೆಯುತ್ತಿರುವಾಗ, ಆಡಳಿತದಲ್ಲಿ ಪ್ರಶ್ನಿಸುವ ಹಕ್ಕು ಇರಬೇಕು. ಮನಸಿದ್ದರೆ ಹಕ್ಕು ಬರುತ್ತೆ. ಬರಲೆಂದು ಬೇಡುವೆನು.

ಕೊಡಗಿನ ಬಡರೈತರೇ! ದೊಡ್ಡ ಹುದ್ದೆಯವರು; ಅಧಿಕಾರಿವರ್ಗದವರು ಧನಿಕರೆಲ್ಲಾ ಈ ದುಂದುಗಾರಿಕೆಯ ಶಾಲೆಗೆ ಮಕ್ಕಳನ್ನು ಕಳುಹಿಸಲಿ; ಆದರೆ ನೀವು ಎಚ್ಚರಿಕೆಯಿಂದ ವರ್ತಿಸಬೇಕು.

'ವಿರಾಜ'

ವಿದ್ಯಾಧಿಕಾರಿಗಳಿಗೆ

'ಗಿರಿಗಿಟ'ಯ ವಿವರ ತಿಳಿದಿರೊ? ಏನಿದು? ಅನೇಕಾನೇಕ ಉಪಾಧ್ಯಾಯರುಗಳಿದ್ದರೂ ಸಹ ಈ ರೀತಿ ಪರೀಕ್ಷೆಗಳಲ್ಲಿ ನಕಲು ಹೊಡೆಯುತ್ತಾರಂತೆ. ಏನನ್ಯಾಯವಿದು; ಅಥವಾ ನೀವೇ ಏನಾದರೂ ಇಂತಹ ವಿಚಾರಗಳ ಪರಾಂಬರಿಕೆಗೆ ಅನಾದರವನ್ನು ತೋರಿಸಿರೆಂದು ಉಪಾಧ್ಯಾಯ ವರ್ಗಕ್ಕೆ ಸೂಚಿಸಿದ್ದೀರೋ? ಈ ಸಂಶಯಕ್ಕೆ ಈ ಕೆಳಗಿನ ತರ್ಕವೊಂದಿದೆ.

S. S. L. C. ಪರೀಕ್ಷೆಯೆಂದರೆ ಕವಿಗಳಲ್ಲಿ ಅಲ್ಲಿ ಕಾಪಿ ಮಾಡಲೇ ಬಾರದು ಮಾಡಿದರೆ ಮೂರು ವರ್ಷಗಳ ವರೆಗೆ 'ಡಿಬಾರ್'. ಕಾಪಿ ಮಾಡದಂತೆ ನೋಡಲು ಇತರ ಶಾಲೆಗಳಿಂದ ಸುಪರ್‌ವೈಸರ್ಸ್ ಆಚೀಚೆ ಮಾಡಿ ಬರುತ್ತಾರೆ. ಅದೇ ರೀತಿ ವಿರಾಜಪೇಟೆಗೆ ನಾಪೋಕ್ಲು ಉಪಾಧ್ಯಾಯರೊಬ್ಬರು, ಎ. ಇ. ಒ, ಹೆ. ಮೂ. ಎಲ್ಲಾ ಇದ್ದರಂತೆ! ಐದು ಸಾಲು ಶಾಲಾ ಹಾಲಿನಲ್ಲಿ ಮಕ್ಕಳು ಕುಳಿತಿದ್ದರಂತೆ. ಅಷ್ಟು ಹತ್ತಿರವಾಗಿ ಕುಳ್ಳಿರಿಸಿ ಕಡೆಗೆ ಇಬ್ಬರು ಸುಪರ್‌ವೈಸಿಂಗಿಗೆ ಇದ್ದರಂತೆ! ಫಲಿತಾಂಶವಾಗಿ ಪುಸ್ತಕಗಳನ್ನೇ ಇಟ್ಟು ನಕಲು ಹೊಡೆದ ನಿದರ್ಶನಗಳೂ ಇದ್ದವು. ಕಡೆಗೆ ನಾಪೋಕ್ಲು ಉಪಾಧ್ಯಾಯರು ಅನೇಕ ಸಲ (ವಾರ್ನ್) ಎಚ್ಚರಿಕೆ ಮಾಡಿದ ನಂತರವೂ ತಡೆಯಲಾರದೆ ಒಬ್ಬನನ್ನು ಹಿಡಿದರಂತೆ. ರಿಪೋರ್ಟೂ ಆಯಿತು. ಮೂರಣೆ ದಿನ ಈ ಉಪಾಧ್ಯಾಯರನ್ನು ಹಾಲಿನಿಂದ ತೆಗೆದು ಕೆಲವೇ ಹುಡುಗರು ಕುಳಿತಿದ್ದ ಕೋಣೆಗೆ ಮೇಲ್ವಿಚಾರಕ್ಕೆ ಕಳುಹಿಸಿದರಂತೆ! ಕಂಡು ಹಿಡಿದ ತಪ್ಪಿಗೆ ಶಿಕ್ಷೆಯೋ? ಇದರ ನಂತರ ಪರೀಕ್ಷೆಗಳೂ ಕಾಪಿಯೂ ಸಾಂಗವಾಗಿ ಸಾಗಿತಂತೆ! ಧಿಕ್ಕಾರವಿರಲಿ ಇಂತಹ ಪರೀಕ್ಷೆಗೆ!

ಇವರಿಂದಾಗಿ ಈ ರೀತಿಯು ಕೆಲಶಗಳಿಗೆ ಉಪಾಧ್ಯಾಯರ ಸಹಾನುಭೂತಿ ಇದೆಯೆಂದ ಹಾಗಾಗುವುದಿಲ್ಲವೇ? ಹಾಗಾಗಿಯೇ ನಾಪೋಕ್ಲು ಶಾಲೆ ಬಿಟ್ಟು ಮತ್ತೆಲ್ಲಾ ಫೌಂಡ ಶಾಲೆಗಳಲ್ಲಿ 'ಡಿಬಾರ್' ಮಾಡುವಷ್ಟು 'ಕಾಪಿ' ಮಾಡಿದ ವಿದ್ಯಾರ್ಥಿಗಳು ಸಿಕ್ಕಿದ್ದು. ಅಂತೂ ಹಾಕಿದ ಪ್ರಶ್ನೆಗಳಿಗೆ ಹಿಂದೊಮ್ಮೆ ಉತ್ತರಿಸಿದಂತೆ ಉತ್ತರಿಸುವ ಎದೆಗಾರಿಕೆ ಹಾಗೂ ನಿವಾರಿಸುವ ಭರವಸೆಯಿದ್ದೇ ನಿನುಗೀಗ ಪ್ರಶ್ನೆಗಳನ್ನು ಹಾಕತ್ತಿರುವುದು ಈ ಸಂಗತಿಗಳಿಗೆ ತಕ್ಕುದನ್ನು ಹೇಳಿ ಧನ್ಯವಾದಗಳನ್ನು ಹಿಂದಿನಂತೆ ಈಗಲೂ ಪಡೆಯಿರಿ.

'ಗೋರಾ'

ನಾಗರೀಕರ ಅವಗಾಹನೆಗೆ.

ಕೊಡಗಿನ ಪ್ರಯಾಣಿಕರಿಗೆ ಬಸ್ ಸರ್ವಿಸ್‌ಗಳಲ್ಲಿ ಸಿಕ್ಕುವ ಸುಗಮ ಪ್ರಯಾಣ ಹೇಗಿರುತ್ತದೆಂದು ಸಕಲರಿಗೂ ವಿದಿತವಾಗಿದೆ. ಅಂತೂ 'ಗೋರಾ' ಮೊದಲಾದವರು ಹೆಚ್ಚಿನ ಸೌಕರ್ಯಗಳನ್ನು ಸೂಚಿಸಿದರೂ, ಅಭ್ಯಂತರ ಏರ್ಪಡು ಈ ಬಸ್ ಸಂಸ್ಥೆಗಳು ಮೂಡೀತೆಂಬ ನಂಬಿಕೆ ಇಲ್ಲ. ಈಗ ಈ ಬಸ್ ಸಂಸ್ಥೆಗಳ ಆಂತರಿಕ ಅವ್ಯವಸ್ಥೆಯ ಬಗ್ಗೆ ಸ್ವಲ್ಪ ಇಣಿಕಿ ನೋಡಿರಿ.

ಹಲವು 'ಲಿವಿ ಟಿಡ್' ಕಂಪೆನಿಯೂ, 'ಪ್ರೊ ಪ್ರೈಟರ್'ನ ಸರ್ವಿಸ್ ಹಾಗೂ ಸ್ವತಃ 'ಮೂಲೀಕರ ಯೂ ಡ್ರೈವರ್'ನ ಸರ್ವಿಸ್ ಇವೆ. ಕಡೆಯದು, ಸಂಸ್ಥೆಯೆಂದರೆ ಸಂಪೂರ್ಣ ಸಮತಾವಾದದಾದರ್ಶ. 'ಪ್ರೊಪ್ರೈಟರ್'ನ ಸರ್ವಿಸ್ ಎಂದರೆ, 'ಡಿಕ್ಟೇಟರ್‌ಶಿಪ್' ಆದರೆ 'ಲಿಮಿಟೆಡ್' ಕಂಪೆನಿಯು ಆಡಳಿತವೆಂದರೆ 'ಹಾಳಾದ ನಾಜೀ ಡಿಕ್ಟೇಟರ್‌ಶಿಪ್' ಹೇಗೋ ಓರ್ವ, ಅಧಿಕಾರ ಪಡೆದನೆಂದರೆ, ಮೇಲಿನವರನ್ನು ಮೆಚ್ಚಿಸಿ ತಳದವರನ್ನು ತುಳಿದು, ತೃಪ್ತಿಯನ್ನು ಪಡೆಯುವ ತವಕ.

ನೀತಿ ರೀತಿ ನಿಯಮಗಳಿಲ್ಲದೆ ಕಂಪೆನಿಗಳಲ್ಲಿ ಮನಸ್ಕೇಚ್ಛೆ ಶಿಕ್ಷೆಗಳು ವಿಧಿಸಲ್ಪಡುತ್ತಿರುತ್ತಿವೆ. ಶ್ರೀ. ಚಂಗಪ್ಪ (ಡ್ರೈವರ್) ಶ್ರೀ. ಚೆ. ಕುಟ್ಟಪ್ಪ (ಕಂಡೆಕ್ಟರ್) ಶ್ರೀ. ಕಾರ್ಯಪ್ಪ (ಏಜೆಂಟ) ಇವರನ್ನೆಲ್ಲಾ ಅವರ ಅಧಿಕಾರಿಗಳು ಕಾರಣವಿಲ್ಲದೆ (ಕಾರಣವಿದ್ದರೂ ಕಾರಣ ತನಿಖೆ ನೂಡಿಯೇ ಹೇಳುವ ವಿಚಾರ) ಸಸ್ಪೆಂಡ್ ಮಾಡಿದ್ದಾರಂತೆ! ತಮ್ಮ ಕರ್ತವ್ಯ ಪಾಲಿಸಿದರೆ ಸಾಲದು, ಈ ಅಧಿಕಾರಿಗಳ ಮನಸ್ಸನ್ನು ಸಂತೋಷಪಡಿಸಬೇಕು. ಇಲ್ಲದಿದ್ದರೆ ಅವನ ಮೇಲೆ ತೃಪ್ತಿ ಇಲ್ಲ. ಯಾರು ಈ ಅಧಿಕಾರಿಗಳನ್ನು ತೃಪ್ತಿಯಲ್ಲಿಡರೋ ಅವನಿಗೆ ತನ್ನ ಮನೆ, ಸಂಸಾರವಿಲ್ಲದಿರುವಂತಹ ಬೇರೆ ಸ್ಥಾನದಲ್ಲಿ 'ಹಾಲ್ಟ್'! 'ಸಸ್ಪೆಂಡ್' ಮಾಡಿಸಿ, ಯಾಕೆ, ಡಿಸ್‌ಮಿಸ್ ಆದವರೂ ಸಹ 'ತೃಪ್ತಿ'ಪಡಿಸಿದರೆ ಪುನಃ ಕೆಲಸ ಬೇಗ ಸಿಕ್ಕುತ್ತೆ! ಶ್ರೀ. ಕೃಷ್ಣನ್ ಎಂಬುವರನ್ನು 27-1-50 ರಿಂದ ಸಸ್ಪೆಂಡ್ ಮಾಡಿ; ಈಗ ತನಿಖೆ ಸಹ ಮಾಡದೆ ಕೆಲವು ದಿನದಿಂದ ಡಿಸ್‌ಮಿಸ್ ಮಾಡಲಾಗಿದೆ. ಇವುಗಳೆಲ್ಲಾ ರೀತಿ ನೀತಿ ನಿಯಮಗಳಿಗೆ ಬದ್ಧವಿರುದ್ಧವಲ್ಲವೇ? ಈ ಸಂಸ್ಥೆಗಳಿಗೆ ಸೇರುವುದು ಬಿಡುವುದು ಎಂದರೆ ಹೊಟೆಲಿಗೆ 'ಕ್ಲೀನಿಂಗ್' ಹುಡುಗರು ಸೇರಿ ಬಿಟ್ಟಂತೆ! ಈ ತೆರದ ನಡತೆ ಧರ್ಮವೆ?

ಶ್ರೀ. ಅಶೋಕ; ದುರ್ಗಾ, ಚಾಂಪಿಯನ್ ಹಾಗೂ ಯೂನಿಯನ್‌ಗಳು ತಮ್ಮ ಜೀವನದ ತಮ್ಮ ನೌಕರರ ಜೀವನದ ವಿವರಗಳಿಗೆ ಗಮನವಿತ್ತೆ ನಾಗರೀಕರ ಸೇವೆಗಿಳಿದಿವೆ.

ಈ ರೀತಿ ಬಸ್ ಲೈನಿದ್ದರಿಹ್ಕ. ಬದಲು ನೂರಾರು ಬಸ್ಸುಗಳಿರುವ ಕಂಪೆನಿಗಳಿಂದ ಜನಹಿತವಾಗಲಾರದು. ಆದ್ದರಿಂದ ಬಸ್ ವಹಿವಾಟು ಒಂದೇ ಸಂಸ್ಥೆಯಲ್ಲಿ ಕೇಂದ್ರೀಕೃತವಾಗಿರದೆ ಹಲವಾರ್ಲಿ ಹಂಚಲ್ಪಟ್ಟಿದ್ದರೆ ನಾಗರೀಕರಿಗೆ ಹೆಚ್ಚಿನ ಹಿತವಾದೀತು.

'ಗೋವಿಂದ'

ಮಡಿಕೇರಿ ಮುನ್ಸಿಪಾಲಿಟಿ ಪ್ರೈಸಿಡೆಂಟರಲ್ಲಿ

ಮಡಿಕೇರಿಯಲ್ಲಿ ಮೂರು ಹೈಸ್ಕೂಲುಗಳಿವೆ. ಹೀಗಿದ್ದೂ ಆರನೆ ತರಗತಿಯಲ್ಲಿ ಕಳೆದ ವರ್ಷ ವಿದ್ಯಾರ್ಥಿಗಳಿಗೆ ಸ್ಥಳದೊರೆಯದೆ ವಿಪರೀತ ತೊಂದರೆಯಾಯಿತು. ಈ ವರ್ಷ ಇನ್ನಷ್ಟು ತೊಂದರೆಯಾಗುವದೆಂದು ಹೇಳಬಹುದು. ವಿದ್ಯಾರ್ಥಿಗಳ ಸಂಖ್ಯೆ ದೇಶದ ಉದ್ದಗಲಕ್ಕೂ ದಿನೇ ದಿನೇ ಹೆಚ್ಚುತ್ತಿರುವದು ನಿಮಗೆ ತಿಳಿಯದಲ್ಲ. ನೀವು ಈ ಪರಿಸ್ಥಿತಿಯಲ್ಲಿ ಜಾಣ್ಮೆಯಿಂದ ವರ್ತಿಸಿದರೆ ಹಲವು ಮಕ್ಕಳಿಗೆ ಹಿತವೊಡಬಹುದು. ಮುನಿಸಿಪಾಲಿಟಿಯ ಆಶ್ರಯದಲ್ಲಿ ಎರಡು ಪ್ರೈಮರಿ ಶಾಲೆಗಳಿವೆ. ಒಂದು ಮುಸ್ಲಿಂ ಶಾಲೆ ಮತ್ತೊಂದು ಎ. ವಿ. ಶಾಲೆ. ಇವುಗಳಲ್ಲಿ ಮುಸ್ಲಿಂ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೇವಲ ೧೦೦ ಇದ್ದು, ೫ನೆ ತರಗತಿಯಲ್ಲಿ ಕೇವಲ ೯ ವಿದ್ಯಾರ್ಥಿಗಳಿರುವರು. ಈ ಶಾಲೆಯಲ್ಲಿ ೪ ಅಧ್ಯಾಪಕರೂ, ಎ. ವಿ. ಶಾಲೆಯಲ್ಲಿ ೧೯೦ ವಿದ್ಯಾರ್ಥಿಗಳಿದ್ದು ೫ ಜನರೂ ಇರುವರು. ಇವೆರಡು ಶಾಲೆಗಳನ್ನು ಒಂದು ಮಾಡಿದರೆ ಹೆಚ್ಚಿನ ಖರ್ಚಿಲ್ಲದೆ ಹೈಯರ್ ಎಲಿಮೆಂಟರಿ ಶಾಲೆಯ ಪ್ರಥಮ ಹೆಜ್ಜೆಯಾಗಿ ಆರನೆ ತರಗತಿಯನ್ನು ಈ ವರ್ಷ ತೆರೆಯಬಹುದು. ಮುಸ್ಲಿಂ ಶಾಲಾ ಕಟ್ಟಡವು ಚೆನ್ನಾಗಿದೆ. ಅಲ್ಲಿಗೆ ಎ. ವಿ. ಶಾಲೆಯನ್ನು ವರ್ಗಾಯಿಸಿದರೆ ೯ ಅಧ್ಯಾಪಕರು ದೊರೆಯುವದಲ್ಲದೆ ಆರನೆ ತರಗತಿಗೆ ಹೆಚ್ಚಿನ ಕಟ್ಟಡದ ಅವಶ್ಯಕತೆ ಇರಲಾರದು. ಈ ಬಗ್ಗೆ ನೀವು ಆಲೋಚಿಸಬೇಕು. ಖಾಲಿ ದೊರೆಯುವ ಎ. ವಿ. ಶಾಲಾ ಕಟ್ಟಡವನ್ನು ಬೇರೆ ಸದುಪಯೋಗ ಗೊಳಿಸಬಹುದು. ಅಲ್ಲಿ ಮುನ್ಸಿಪಲ್ ಆಸ್ಪತ್ರೆಯೊಂದನ್ನು ಇಡುವ ಏರ್ಪಾಡು ಮಾಡಬಹುದು. ನಿಮ್ಮ ಅಧ್ಯಕ್ಷತೆಯ ಈ ಸಮಯದಲ್ಲಿ ಈ ರೀತಿಯ ಜನಹಿತಕಾರ್ಯಮಾಡಿ ನಿಮ್ಮ ಹೆಸರು ಚಿರಸ್ಮರಣೀಯವಾಗಿರುವಂತೆ ಮಾಡುವಿರಾ?

'ವಿದ್ಯಾಭಿಮಾನಿ'

ಅನಿಷ್ಟ ನೀತಿ.

ಕೊಡಗು ಎಡ್‌ಹಾಕ್ ಜಿಲ್ಲಾ ಕಾಂಗ್ರೆಸ್ ಸಮಿತಿಯವರು ತಮಗೆ ಮನಸ್ತೃಪ್ತಿಯಾಗುವಂತೆ ಕಾಂಗ್ರೆಸ್ ಪಂಚಾಯ್ತರ ಚುನಾವಣೆ ಮಾಡಿದರು. ಈ ಎಡ್‌ಹಾಕ್ ಸಮಿತಿಯು ಯಾರ ಆಶ್ರಯದಲ್ಲಿ ಕೆಲಸ ಮಾಡುತ್ತಿದೆಯೋ, ಕಾಂಗ್ರೆಸ್ ಮೇಲಧಿಕಾರಿಗಳಿಗೂ ಇದಕ್ಕೂ ಸಂಬಂಧವೇ ಇಲ್ಲವೋ ಎನ್ನುವಂತೆ ಇದರ ಕಾರ್ಯಸಾಗಿದೆ. ಇದಾವುದಿಲ್ಲದಿದ್ದರೂ ಕಡೆಗೆ ಈ ಸಮಿತಿಯವರಾರೂ ಪತ್ರಿಕೆಗಳನ್ನಾದರೂ ಓದುವದಿಲ್ಲವೇ ಎಂದು ಆಶ್ಚರ್ಯಪಡಬೇಕಾಗಿದೆ. ಕಾಂಗ್ರೆಸ್ ಪಂಚಾಯ್ತರ ಚುನಾವಣೆಯ ಬಗ್ಗೆ ಯಾವದೇ ನಿಶ್ಚಿತ ಕಾರ್ಯಕ್ರಮವನ್ನು ಅಖಿಲ ಭಾರತ ಕಾಂಗ್ರೆಸ್ಸು ಸೂಚಿಸಿರಲಿಲ್ಲ. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ತನ್ನ ಕಳೆದ ಅಧಿವೇಶನದಲ್ಲಿ ಚುನಾವಣೆಯನ್ನು ಸ್ಪಷ್ಟವಾಗಿ ಮುಂದರಿಸಿತ್ತು. ನಂತರ ಕೆ. ಪಿ. ಸಿ. ಸಿ ಯೂ ಕೂಡ ಅದರಂತೆ ಸರ್ಕ್ಯೂಲಾರ್ ಹೊರಡಿಸಿತ್ತು. ಆದೂ ಅಲ್ಲದೆ ಪಂಚಾಯ್ತರ ಚುನಾವಣೆ ಹೇಗೆ ನಡೆಯಬೇಕೆಂಬುದಕ್ಕೂ ಸಲಹೆ ಇತ್ತಿತ್ತು. ಅಲ್ಲದೆ ಸ್ಪಷ್ಟವಾಗಿ ಚುನಾವಣಾ ತಾರೀಕುಗಳನ್ನು ಹಿಂದಿನಿಂದ ತಿಳಿಸಲಾಗುವದೆಂದೂ ಸೂಚಿಸಿತ್ತು. ಆದರೆ ಕೊಡಗಿನ ಎಡ್‌ಹಾಕ್ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಇದಾವುದೂ ಬಹುಶ: ತಿಳಿದಿರಲಿಲ್ಲವೇನೋ! ನಿರಂಕುಶ ರೀತಿಯಲ್ಲಿ ನೀತಿರೀತಿಗಳನ್ನು ಬಿಟ್ಟು ತನಗೆ ಬೇಕಾದವರ ಚುನಾವಣೆ ಮಾಡಿತು. ಇಂಥಾ ಚುನಾವಣೆಗಳ ನಿಯಮ ಬಾಹಿರವಾದುವೆಂದು ಅನೇಕರು ಪತ್ರಿಕೆಗಳಲ್ಲಿ ಬರೆದರು. ಆದರೆ ಕಳೆದ ಐದಾರು ವರ್ಷಗಳಿಂದ ಕೆದಲದೆ, ತಲೆಎತ್ತಿ ನೋಡದೆ, ತನ್ನ ಸ್ಥಾಂದರ್ಯದ ಪ್ರಶಂಶೆಯಲ್ಲೇ ಮೈಮರೆತಿರುವ ಎಡ್‌ಹಾಕ್ ಸಮಿತಿಯ ಮುದಿಪ್ರಾಯದ ಜಡತ್ವಿನ ಕಡೆಗೆ ನೋಡುವ ಚೈತನ್ಯವೆಲ್ಲಿದೆ? ತನ್ನ ಮೇಲಿರುವ ಕಾಂಗ್ರೆಸ್ ಹೈಕಮಾಂಡಿನ ಅಜ್ಞೆಕೂಡ ಅದಕ್ಕೆ ಅರ್ಥವಾಗದಂತಾಗಿದೆ. ಕಡೆಗೆ ಈ ಕುರುಡುತನದಲ್ಲಿ ನಡೆಸಿದ ಚುನಾವಣೆಗಳೆಲ್ಲಾ ರದ್ದಾಗಿರಬೇಕೆಂದು ಕೆ. ಪಿ. ಸಿ. ಸಿ. ಸರ್ಕ್ಯೂಲಾರ್ ಹೊರಡಿಸಿತು. ಆದ್ದರಿಂದ ಇಳಿವಯಸ್ಸಿನಲ್ಲಿ ಈ ವರೆಗೆ ಓಡಾಡಿದ್ದೂ ನಿಷ್ಫಲವಾಯಿತು. ಜನತೆ ಈ ಸಮಿತಿಯ ಕುರುಡುತನವನ್ನು ಗುರ್ತಿಸಿಕೊಳ್ಳಬೇಕು. ಎಂದೆ ಚುನಾವಣೆಯ ತಾರೀಕು ಪ್ರಕಟವಾದಾಗ ಸರಿಯಾಗಿ ವರ್ತಿಸಿ ತಮ್ಮನ್ನು ಮುನ್ನಡೆಸುವ ಜವಾಬ್ದಾರಿಯನ್ನು ಕುರುಡರಿಗೊಪ್ಪಿಸಿಗಂಡಾಂತರ ತಂದುಕೊಳ್ಳಬಾರದು.

ಸೋಮಯ್ಯ.

ಓದುಗರ ಓಲೆಗಳು.

ವಿವರಣೆ ಬೇಕು.

ತಾರೀಕು ೨೯-೩-೩೦ಕ್ಕೆ ಇಟ್ಟಿದ್ದ ಕೌನ್ಸಿಲ್ ಬಜೆಟ್ ಮೀಟಿಂಗನ್ನು ಏಪ್ರಿಲ್ ತಾರೀಕು ೧೭ ಕ್ಕೆ ಮುಂದರಿಸಿರುವದೆಂದು ತಿಳಿಯಬಂದಿದೆ. ಕೊಡಗಿನ ಶಾಸನ ಸಭೆಯ ಚರಿತ್ರೆಯಲ್ಲಿ ಆಗದ ಒಂದು ಘಟನೆ ಇದು. ನನಗೆ ತಿಳಿದಿರುವಂತೆ ಸರಕಾರದ ಆಡಳಿತ ವರ್ಷ ಅಂತ್ಯವಾಗುವದರೊಳಗೆ ಮುಂದಿನ ವರ್ಷದ ಬಜೆಟ್ ಶಾಸನ ಸಭೆಯಿಂದ ಮಂಜೂರಾಗಬೇಕು. ಆದ್ದರಿಂದಲೇ ಯಾವದೇ ತೊಂದರೆ ಇದ್ದರೂ ಮಾರ್ಚಿ ಅಂತ್ಯದೊಳಗೆ ಬಜೆಟ್ ಮೀಟಿಂಗನ್ನು ಮುಗಿಸುವದಾಗಿದೆ. ಬಜೆಟ್ ಮಂಜೂರಾಗದೆ ಆಡಳಿತ ನಡೆಸುವವರು ಒಂದು ಪೈಯನ್ನೂ ಕೂಡ ಖರ್ಚು ಮಾಡಲು ಬಾಧ್ಯರಲ್ಲ. ಹಾಗಿರುವಾಗ ಈ ಏಪ್ರಿಲ್ ತಾರೀಕು ೧೭ ರಿಂದ ಬಜೆಟ್ ಮಂಜೂರಾಗುವ ವರೆಗಿನ ಅವಧಿಯಲ್ಲಿ ಸರಕಾರವು ಬಚ್ಚು ಮಾಡುವ ಹಣವು ಆಡಳಿತ ನೀತಿಗೂ, ಪ್ರಜಾ ಜವಾಬ್ದಾರಿ ತತ್ವಕ್ಕೂ ವಿರುದ್ಧವೆನ್ನಬಹುದು. ಚೀಫ್ ಕಮಿಷನರಿಗೆ ಈ ಬಗ್ಗೆ ವಿಶೇಷ ಅಧಿಕಾರಗಳಿವೆಯೋ ನನಗೆ ತಿಳಿಯದು. ಅದರೆ ಅಂಥಾ ಅಧಿಕಾರಗಳಿದ್ದರೂ ಅದನ್ನು ಉಪಯೋಗಿಸುವ ಅವಶ್ಯಕತೆ ಇರಲಿಲ್ಲ. ಬಜೆಟ್ ಪ್ರಿಂಟಾಗಿ ದೊರೆಯಲಿಲ್ಲ ವೆಂಬುದು ಇಂಥಾ ನಿಯಮವಿರುದ್ಧ ವರ್ತನೆಗೆ ಸಮಂಜಸ ಕಾರಣವಾಗದು. ಸಂಪೂರ್ಣ ಸ್ವಾತಂತ್ರ್ಯ ಪಡೆದ ಹಿಂದೂ ದೇಶದಲ್ಲಿ ಹಿಂದಿನ ನಿರಂಕುಶ ಆಡಳಿತೆಯ ಈ ಮಾದರಿಗಳು ತೊಲಗಬೇಕು. ಈ ಪರಿಸ್ಥಿತಿಗೆ ತಕ್ಕ ಸಮುಜಾಯಿಸಿಕೆಯನ್ನು ಪತ್ರಿಕೆ ಮೂಲಕ ಸಂಬಂಧಿಸಿದವರು ಕೊಡಬೇಕು. 'ನಾಗರಿಕ'

ಪತ್ತೆಯಾಗಬೇಕು.

ಕೊಡಗಿನಲ್ಲಿ ದನಗಳ ಸಮಸ್ಯೆ ಬಹು ಜಠಿಲವಾದುದು. ಇದರ ಜೊತೆಗೆ ಅನೇಕ ಪುಂಡಾಟಿಕೆಯು ಕೊಲೆಯೂ ನಡೆಯುತ್ತಿದೆ. ತಾರೀಕು ಹತ್ತರಲ್ಲಿ ಕ್ರಿಸ್ತ ಮತದವರಾದ ರೈತಾನೆಗೌನ್ ಎಂಬವರ ಸುಮಾರು ನೂರು ರೂಪಾಯಿ ಬೆಲೆ ಬಾಳುವ ಕೋಣವನ್ನು ಆರಮೇರಿ ಗ್ರಾಮದಲ್ಲಿ ಹೊಳೆಯ ಹತ್ತಿರದ ಬಿದಿರು ಕಾಡಿನ ಮಧ್ಯದಲ್ಲಿ ಯಾರೋ ಕುತ್ತಿಗೆ ಕಡಿದು ಚರ್ಮ ಸುಲಿದು ತೆಗೆದುಕೊಂಡಿರುವರು. ಮಾಂಸವನ್ನು ಅಲ್ಲೇ ಬಿಟ್ಟಿಂತಿದೆ. ಇದೇ ರೀತಿ ತಾ. ೨೩ರಲಿ ಅಳಮಂಡ ಚಂಗಪ್ಪನವರ ಒಂದು ಎತ್ತನ್ನು ಹೀಗೆ ಕಡಿದು ಚಕ್ಕಳ ಸುಲಿದಿರುವರು. ಆದರ ಮಾಂಸವನ್ನು ಉಪಯೋಗಿಸಿದಂತೆ ತೋರಲಿಲ್ಲ. ಇದನ್ನು ಮರಕ್ಕೆ ಕಟ್ಟಿದ ಹಗ್ಗವು ಈಗಲೂ ಅಲ್ಲಿದೆ. ಈ ರೀತಿ ಗ್ರಾಮದ ರೈತನ ದನಗಳ ಕೊಲೆಯಾದರೆ ರೈತನಿಗೆ ಉಳಿಗಾಲವೆಲ್ಲಿ? ಆದ್ದರಿಂದ ಸಂಬಂಧಿಸಿದವರು ಈ ವಿಚಾರ ತನಿಖೆ ಮಾಡಿ ಎಚ್ಚರಿಸಬೇಕು.

ಕೆ. ಎಂ.

ಹಾಲು ಸರಬರಾಯಿ

ಮಡಿಕೇರಿಯಲ್ಲಿ ಕೆಲವರು ಹಾಲು ವ್ಯಾಪಾರ ನಡೆಸುತ್ತಾರೆ. ಫ್ರೇಜರ್ ಪೇಟೆ ಕಡೆಯಿಂದಲೋ, ಇಲ್ಲವೇ ಬ್ಯೇರೆ ಕಡೆಯಿಂದಲೋ ಹಾಲು ಒದಗಿಸಿ ಮಡಿಕೇರಿಯ ಪುಂಜೆನರಿಗೆ ಸರಬರಾಯಿ ಮಾಡುತ್ತಾರೆ. ಮಡಿಕೇರಿಯಲ್ಲಿ ಹಾಲಿನ ದರ ಸೇರಿಗೆ ಎಂಟಾಣೆ ಇದೆ. ಎಂಟಾಣೆಗೆ ಒಂದು ಸೇರು ಉತ್ತಮ ಹಾಲು ದೊರೆತರೆ ಚಿಂತೆಯಿಲ್ಲ. ಆದರೆ ಮಡಿಕೇರಿಯಲ್ಲಿ ದೊರೆಯುವ ಬಹುತೇಕ ಹಾಲೆಲ್ಲವೂ ಹಾಳು. ಮೊನ್ನೆಯೂಗಿ ಮಡಿಕೇರಿ ಮುನ್ಸಿಪಲ್ ಸೇನಿಟರಿ ಇನ್ಸ್‌ಪೆಕ್ಟರರು ಮೂರು ಜನ ಹಾಲು ಮಾರಾಟಗಾರರ ಹಾಲನ್ನು ಹಿಡಿದು ಅವರ ಮೇಲೆ ಕ್ರಮ ಜರುಗಿಸಿದರು. ಇವರ ಹಾಲನ್ನು ಪರೀಕ್ಷಿಸಿ ಅದರ ಯೋಗ್ಯತೆಯನ್ನು ತಿಳಿಯಲು ಬೆಂಗಳೂರಿಗೆ ಕಳುಹಿಸಲಾಗಿತ್ತು. ಇವುಗಳಲ್ಲಿ ಒಬ್ಬನ ಹಾಲು ಶೇಕಡ ಲಜರಷ್ಟು ನೀರೆಂದೂ ಮತ್ತೆ ಇಬ್ಬರದರಲ್ಲಿ ಶೇಕಡ ೭ಜರ ಷ್ಟು ನೀರೆಂದೂ ತಿಳಿಯಬಂದಿದೆ. ಈ ಲೆಕ್ಕ ಪ್ರಕಾರ ಮಡಿಕೇರಿಯಲ್ಲಿ ಒಂದು ಪಾವು ಹಾಲಿನ ಎಂಟಾಣೆ ಕೊಟ್ಟಂತಾಯಿತು! ಸಂಬಂಧಿಸಿದವರು ಜಿಗ್ರಾಗ್ಯೆ ಪರಿಶೋಧನೆ ನಡೆಸಿ ಈ ರೀತಿ ನೀರನ್ನು ಹಾಲೆಂದು ನೂರುವ ಪರಿಪಾಠವನ್ನು ತಪ್ಪಿಸುವರಾಗಿ ಆಶಿಸಲಾಗಿದೆ.

'ಪುರನಿವಾಸಿ'

ಲಿಯೊಖತ್ ನೆಹರೂ ಭೇಟಿ.

ಪೂರ್ವ ಬಂಗಾಳದಲ್ಲಾದ ಹತ್ಯಾಕಾಂಡನ ಪ್ರತೀಕಾರವಾಗಿ ಪಶ್ಚಿಮಬಂಗಾಳ ಪ್ರಾಮುಖ್ಯವಾಗಿ ಕಲ್ಕತ್ತಾದಲ್ಲಿ ಕೆಲವಟ್ಟಿಗೆ ೧೪ಘಟೆಗಳಾಗಿವೆ. ಈ ಗಲಭೆಗಳು ಈಗ ಶಮನಗೊಂಡಿದ್ದರೂ ಇನ್ನು ಇಂಥಾ ಘಟನೆಗಳಾಗದಂತೆ ಎಚ್ಚರಿಕೆ ವಹಿಸುವರೆ ಪಾಕಿಸ್ತಾನದ ಮುಖ್ಯಮಂತ್ರಿ ಲಿಯೊಖತ್ ಅಲಿಖಾನರು ಮತ್ತು ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರೂರವರ ಭೇಟಿ ಡೆಲ್ಲಿಯಲ್ಲಿ ಏಪ್ರಿಲ್ ೨ನೇ ತಾರೀಕಿನಲ್ಲಿ ನಡೆಯುವದು. ಪಶ್ಚಿಮ ಬಂಗಾಳದ ಪರಿಸ್ಥಿತಿಯನ್ನು ಪಂಡಿತ ನೆಹರೂರವರು ಎರಡು ಬಾರಿಹೋಗಿ ಸ್ವತಹ ನೋಡಿ, ತಕ್ಕ ವ್ಯವಸ್ಥೆಮಾಡಿ ಬಂದಿರುವರು. ಲಿಯೊಖತ್ ಅಲಿಖಾನರು ಮೊನ್ನೆಯಾಗಿ ಪೂರ್ವ ಬಂಗಾಳಕ್ಕೆ ಸಂದರ್ಶನವಿತ್ತು ಅಲ್ಲಿಯೆ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದಾರೆ. ಅದರ ನಂತರ ಈ ವಿಚಾರದಲ್ಲಿ ಅವರು ಕೊಟ್ಟ ಹೇಳಿಕೆಯು ಆಶಾದಾಯಕವಾಗಿದ್ದು ಈ ಗಲಭೆಗಳ ವಿಚಾರ ನೆಹರೂ ಮತ್ತು ಲಿಯೊಖತರು ಜೊತೆಯೂಗಿ ಒಂದು ಹೇಳಿಕೆಯನ್ನು ಹೊರಡಿಸಲಿದ್ದಾರೆ. ಇದಲ್ಲದೆ ಡೆಲ್ಲಿ ಮಾತುಕತೆಯಲ್ಲಿ ಕಾಶ್ಮೀರ ಸಮಸ್ಯೆ ಇತರ ವ್ಯಾಪಾರ ಸಂಬಂಧದ ವಿಚಾರಗಳೂ ವಿವೇಚಿಸಲ್ಪಡುವವೆಂದು ತಿಳಿದುಬಂದಿದೆ.

ಲೆಫ್ಟನೆಂಟ್ ಕರ್ನಲ್

ದಯೂಸಿಂಗ್ ಬೇಡಿಯವರು

ಕೊಡಗಿನ ಚೀಫ್ ಕಮಿಷನರಾಗಿ ಇವರು ತಾರೀಕು ೨೦-೩-೫೦ ರಿಂದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ತೆಳ್ಳಗಿನ ಶರೀರದ ಸುಮಾರು ಐದೂವರೆ ಅಡಿ ಎತ್ತರದ ಸಿಕ್ ಗಡ್ಡದ ಬೇಡಿಯವರು ಅವರ ವಯಸ್ಸಿಗೆ ಸ್ವಲ್ಪ ಎಳೆಯದಾಗಿಯೇ ತೋರುತ್ತಾರೆ. ಬೇಡಿಯವರು ೧೯೦೯ನೇ ಜನವರಿ ೨೭ರಲ್ಲಿ ಹುಟ್ಟಿದರು ಇವರ ವಿದ್ಯಾಭ್ಯಾಸವು ಲಾಹೋರಿನಲ್ಲಾಯಿತು. ನಂತರ ಇವರು ಇಂಗ್ಲಂಡಿನ ಸೆಂಡ್ಹರ್ಸ್ಟ್ ಮಿಲಿಟರಿ ಎಕಾಡೆಮಿಯನ್ನು ಸೇರಿ ೧೯೩೧ರಲ್ಲಿ ಹಿಂದೂದೇಶದ ಸೈನ್ಯದಲ್ಲಿ ಕಮಿಷನ್ ಪಡೆದ ಅಧಿಕಾರಿಯಾಗಿ ಸೇರಿದರು. ೧೯೩೮ರ ವರೆಗೆ ಸೈನ್ಯದಲ್ಲಿದ್ದ ಇವರನ್ನು ಇಂಡಿಯಾ ಸರಕಾರದ ವಿದೇಶ ಮತ್ತು ರಾಜಕೀಯ ಇಲಾಖೆಗೆ ತೆಗೆದುಕೊಳ್ಳಲಾಯಿತು. ಇವರ ಈ ಅಧಿಕಾರದ ಪ್ರಥಮ ವರ್ಷಗಳು ಮುದ್ರಾಸು ಮತ್ತು ಮಧ್ಯ ಪ್ರಾಂತದ ಸಂಸ್ಥಾನಗಳಲ್ಲಿ ಕಳೆಯಿತು. ಅಲ್ಲಿ ಇವರು ಅಸಿಸ್ಟೆಂಟ್ ಪೊಲಿಟಿಕಲ್ ಏಜಂಟರಾಗಿದ್ದರು. ನಂತರ ಇವರು ಪಶ್ಚಿಮ ಭಾರತ ಮತ್ತು ರಜಪುತಾನ ಗಳಲ್ಲಿ ಅಲ್ಲಿಯ ರೆಸಿಡೆಂಟರಿಗೆ ಸೆಕ್ರೆಟರಿಯಾಗಿ ಕೆಲಸ ಮಾಡಿದರು. ೧೯೩೫-೪೭ರ ವರೆಗೆ ಅವರು ಗಡಿನಾಡು ಮತ್ತು ಬಲೂಚಿಸ್ತಾನಗಳಲ್ಲಿ ಇದ್ದರು ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಅವರು ಥಾಲ್ ಮತ್ತು ಕೋಹಟ್ ಪ್ರದೇಶಗಳ ಅ. ಕ ಮಿಷನರಾಗಿಯೂ ಬಲೂಚಿ ಸ್ಥಾನದಲ್ಲಿ, ಗವರ್ನರ್ ಜನರಲರ ಏಜಂಟಿನ ಸೆಕ್ರೆಟರಿಯಾಗಿಯೂ ನಂತರ ರೆಸಿಡೆಂಟ್ ಮತ್ತು ಚೀಫ್ ಕಮಿಷನರಾಗಿಯೂ ಇದ್ದರು. ೧೯೩೮ನೇ ನವಂಬರಿನಲ್ಲಿ ಕೈಬಿಟ್ಟದ ರಾಜಕೀಯ ಏಜಂಟರಾಗಿ ಇವರು ನೇಮಿಸಲ್ಪಟ್ಟರು. ೧೯೩೯ನೇ ಇವರು ಬಲೂಸ್ತಾನದ ಲೋರಲಾಯ್ ಎಂಬುದರ ರಾಜಕೀಯ ಏಜಂಟರಾಗಿ ನೇಮಕವಾಗಿ ೧೯೪೧ರ ವರೆಗೆ ಅಧಿಕಾರದಲ್ಲಿದ್ದರು. ೧೯೪೧ ಜನವರಿಯಿಂದ ೧೯೪೪ನೇ ಸೆಪ್ಟೆಂಬರ್ ವರೆಗೆ ಅವರು ಹರಿಪುರ ಜಿಲ್ಲೆಯ ಡೆಪ್ಯೂಟಿ ಕಮಿಷನರಾಗಿದ್ದರು. ನಂತರ ಅವರು ಆಫ್ಘಾನಿಸ್ತಾನದ ಬಡೆಯಲ್ಲಿರುವ ಕುರಾಮ್ ಎಂಬಲ್ಲಿ ರಾಜಕೀಯ ಏಜೆಂಟರಾಗಿ ನೇಮಕ ಹೊಂದಿದ್ದರು. ೧೯೪೪ರಲ್ಲಿ ಇವರು ಒರಿಸ್ಸಾ ಸಂಸ್ಥಾನಗಳ ರಾಜಕೀಯ ಏಜೆಂಟರಾಗಿ ನೇಮಕ ಹೊಂದಿದರು. ೧೯೪೭ರಲ್ಲಿ ರಜಪುತಾನೆ ಸಂಸ್ಥಾನಗಳ ರೀಜನಲ್ ಕಮಿಷನರಾದರು. ೧೯೪೭ರ ನೇ ಆಗಸ್ಟ್ ತಿಂಗಳಲ್ಲಿ ಇವರು ಆಸ್ಟ್ರೇಲಿಯಾದಲ್ಲಿ ಹಿಂದೂದೇಶದ ಹೈಕಮಿಷನರಾಗಿ ನೇಮಿಸಲ್ಪಟ್ಟರು. ಅಲ್ಲಿ ಸುಮಾರು ಒಂದೂವರೆ ವರ್ಷಗಳ ವರೆಗಿದ್ದು ಈಗ ಕೊಡಗಿನ ಚೀಫ್ ಕಮಿಷನರಾಗಿರುವರು.

ಮೇಲ್ಕಂಡಂತೆ ವಿವಿಧ ಜವಾಬ್ದಾರಿಯನ್ನು ಹೊತ್ತು ಅನುಭವಿಕರಾದ ಇವರು ಕೊಡಗಿನ ಆಡಳಿತ ಜವಾಬ್ದಾರಿಯನ್ನು ಹೇಗೆ ನಿರ್ವಹಿಸುವರೆಂಬುದನ್ನು ಮುಂದೆ ನೋಡಬೇಕಾಗಿದೆ. ಕೊಡಗಿಗೆ ಬಂದು ಆದ ಹತ್ತು ದಿನಗಳ ಅಲ್ಪ ಪರಿಚಯದಿಂದ ಹೇಳುವದಾದರೆ ಅವರು ಪ್ರಥಮ ದರ್ಜೆಯ ಕ್ರೀಡಾಸಕ್ತರು (Sportsman) ಆಟೋಟಗಳಲ್ಲಿ, ಕೋವಿ ತುಬಾಕಿಗಳಲ್ಲಿ ತುಂಬಾ ಮಮತೆ ಇರುವವರೆಂದು ಹೇಳಬಹುದು. ಆದೇ ರೀತಿ ಆಡಳಿತ ವಿಚಾರಗಳಲ್ಲೂ ಕುಶಲರಿರಬಹುದೆಂದು ಊಹಿಸಬಹುದೇ?

ಬೇಡಿಯವರು ಸಿಕ್ ಮತ ಸಂಸ್ಥಾಪಕರಾದ ಗುರು ನಾನಕರ ವಂಶದವರು. ಇವರ ಕುಟುಂಬವು ಪಂಜಾಬಿನಲ್ಲೂ ಹಿಂದೂದೇಶದ ಉದ್ದಗಲಕ್ಕೂ ಇರುವ ಸಿಕ್ ಮತಸ್ಥರಿಂದ ಗೌರವಿಸಲ್ಪಡುತ್ತದೆ. ಬೇಡಿಯವರಿಗೆ ಪತ್ನಿ, ಒಬ್ಬನೇ ಪುತ್ರ ಮತ್ತು ಇಬ್ಬರು ಪುತ್ರಿಯರಿಂದ ಕೂಡಿದ ಸಂಸಾರ. ಆಸ್ಟ್ರೇಲಿಯಾದಲ್ಲಿ ಇವರ ಮಗನೇ ಇವರಿಗೆ ಖಾಸಗಿ ಕಾರ್ಯದರ್ಶಿಯಾಗಿದ್ದರಂತೆ! ಉತ್ತಮ ಹಿನ್ನೆಲೆಯಿಂದ ಕೂಡಿದ ಬೇಡಿ ಕುಟುಂಬವು ಕೊಡಗಿನ ಸೇವೆಯನ್ನು ಪ್ರಶಂಸನೀಯವಾಗಿ ಮಾಡುವದೆಂದು ಎಲ್ಲರೂ ಆಶಿಸುವದರಲ್ಲಿ ಆಶ್ಚರ್ಯವಿಲ್ಲ.

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director: – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.

(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO., Ltd.

(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

Apply to:

Chief Agency Office *Virajpet (Coorg)* *or* **A. S. Aiyappa,** *Branch Secretary, Gandhinagar, BANGALORE CITY*

ಅನೈತಿಕತೆಗೆ ಕಾರಣರಾರು?

ಲೇ:– ಶ್ರೀ ಎಂ. ಎಸ್. ಪೊಣ್ಣಪ್ಪ, ಕಾನೂರು.

ಈಗ ಕೆಲವು ವರ್ಷಗಳಿಂದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಲ್ಲಿ ಬೆಳೆದು ಬರುತ್ತಿರುವ ಅನೈತಿಕ ವರ್ತನೆ ಅನೇಕರನ್ನು ಯೋಚನಾಪರರನ್ನಾಗಿ ಮಾಡಿದೆ. ಅವರ ಈ ಅನೀತಿಗೆ ಯಾ ಅಘಟಿತನಕ್ಕೆ ಅವರನ್ನು ಸಾಕಿ ಸಲಹಿದ ತಂದೆ ತಾಯಿಗಳೂ ವಿದ್ಯೆಯನ್ನು ಕಲಿಸುವ ಉಪಾಧ್ಯಾಯರುಗಳೂ ಕೆಲವು ಸಂದರ್ಭಗಳಲ್ಲಿ ಸಾರ್ವಜನಿಕರೂ ಕಾರಣರಾಗಿರುತ್ತಾರೆ. ಇದಕ್ಕಾಗಿ ಮಕ್ಕಳನ್ನೇ ದೂರುವುದು ಸಮಂಜಸವಲ್ಲ. ಈಗಿನ ಜನರು ಸಂತಾನೋತ್ಪತ್ತಿಯ ದೃಷ್ಟಿಯಿಂದ ಸಂಸಾರವನ್ನು ಹೂಡುವುದಿಲ್ಲವಾಗಿಯೂ ಬರೀ ಕಾಮತೃಪ್ತಿಯ ದೃಷ್ಟಿಯಿಂದಲೇ ಸಂಸಾರ ಸ್ಥರಾಗುವರೆಂದೂ ಹೇಳಿದರೆ ತಪ್ಪಲ್ಲ. ಯಾವನೊಬ್ಬ ಸಂಸಾರಿಯನ್ನು ಕೇಳಿದರೂ ಆತನ ಜೀವಿತದಲ್ಲಿ ಒಂಟಿಯಾಗಿದ್ದಾಗಲೇ ಹೆಚ್ಚು ಆನಂದದಲ್ಲಿದ್ದನೆಂದೂ ಲಗ್ನದನಂತರ ಹಲವಾರು ವಿಘ್ನಗಳು ತಲೆದೋರಿ ತೊಂದರೆಗೀಡಾದನೆಂದೂ ಹೇಳದಿರಲಾರ. ಇದಕ್ಕೆ ಕಾರಣವೇನು? ತಾನು ಮುದುಮೆಯಾಗಿ ಸಂಸಾರಸ್ಥನಾಗಲು ಆರ್ಹನೆ, ಎಂದು ಆತನು ಮೊದಲು ಯೋಚಿಸುವುದಿಲ್ಲ. ಜೀವಿತದ ಅವಶ್ಯಕತೆಗಳನ್ನು ಪೂರೈಸಲು ತಕ್ಕಷ್ಟು ಉತ್ಪತ್ತಿಯನ್ನು ತಾನು ಮಾಡಬೇಕೆಂಬ ಯೋಚನೆಯು ಆತನಿಗೆ ಯೌವನದಲ್ಲಿ ತಲೆದೋರುವುದಿಲ್ಲ. ಬಾಹ್ಯಾಡಂಬರಕ್ಕೆ ಮರುಳಾಗಿ ಅಪಕ್ವ ಪದ್ಧತಿಗೆ ಕಟ್ಟು ಬಿದ್ದು ಮದುವೆಯಾಗುವವರೆಲ್ಲಾ ಈ ತರಹ ಮೂತನ್ನಾಡದಿರರು.

ಇಂತಹ ಕಷ್ಟ ಜೀವನದಲ್ಲಿ ಕಾಲಿಟ್ಟವರು ತನುಗೆ ಬೇಡದಿದ್ದರೂ ದಂಪತಿಗಳ ಕಾಮಕೂಟದಿಂದಾಗುವ ಮಕ್ಕಳನ್ನು ತಡೆಹಿಡಿಯಲಾರರು. ತನ್ನ ಮಕ್ಕಳ ವಿಷಯದಲ್ಲಿ ಹೆಚ್ಚು ಲಕ್ಷ್ಯವನ್ನಿಡಲಾರದೆ ಅವು ಶಿಸ್ತುಶೀಲಗಳಲ್ಲದೆ ಬೆಳೆದು ಶಾಲೆಯನ್ನು ಸೇರುವವು. ಹುಟ್ಟಿದ ಮಗುವಿಗೆ ತಾಯಿಯು ಮೊಲೆಯುಣಿಸುವಾಗ ಕೂಡ ಕ್ರಮವಿರಬೇಕು. ಅಲ್ಲಿಂದಲೇ ಮಗುವಿನಲ್ಲಿ ತಕ್ಕ ಶಿಸ್ತು ಶೀಲಗಳಿರಬೇಕೆಂದು ತಂದೆತಾಯಿಗಳು ಗಮನಿಸಿದ್ದೇ ಆದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ ಪೋಷಕರು ತನ್ನ ಜವಾಬ್ದಾರಿಯನ್ನು ಮರೆತು ತನ್ನ ಮಕ್ಕಳ ವಿಷಯವಾಗಿ ಮತ್ತೊಬ್ಬರ ಮೇಲೆ ತಪ್ಪು ಹೊರಿಸುವುದು ನ್ಯಾಯವಾಗದು. ನಿಶ್ಚಿತ ಶಿಸ್ತಿನಿಂದ ಹಾಲುಣಿಸದ ಮಗುವು ಶಿಸ್ತು ತಪ್ಪಿದ ಮಗುವಾಗಿ ಬೆಳೆಯುವುದರಲ್ಲಿ ಸಂದೇಹವಿಲ್ಲ! ಚಿಕ್ಕ ಮಕ್ಕಳೊಂದಿಗೆ ತಂದೆತಾಯಿಗಳು ಪ್ರೇಮಕ್ಕೆಂದು ಬಯ್ಯುವುದಕ್ಕೂ ಹೊಡೆಯುವುದಕ್ಕೂ ಒದೆಯುವುದಕ್ಕೂ ಉಗಿಯುವುದಕ್ಕೂ ಕಲಿಸುವುದನ್ನು ನಾನು ನೋಡಿದ್ದೇನೆ ಈ ರೂಢಿಯು ನಮ್ಮ ಮಕ್ಕಳು ಬೆಳೆದಾಗಲೂ ಬಿಡರು. ಇಂತಹ ಮಕ್ಕಳು ಶಾಲೆಯಲ್ಲಿ ಉಪಾಧ್ಯಾಯರ ಹತೋಟಿಯಲ್ಲಿರುವುದೂ ಕಷ್ಟಸಾಧ್ಯ. ನೂರಾರು ಮಕ್ಕಳಲ್ಲಿ ಪ್ರತಿಯೊಬ್ಬನ ವಿಷಯದಲ್ಲೂ ಸೂಕ್ಷ್ಮದೃಷ್ಟಿಯನ್ನಿಟ್ಟು ಕ್ರಮಬದ್ಧ ವಿದ್ಯಾರ್ಥಿಯನ್ನಾಗಿ ಮಾಡುವುದು ಯಾವ ಉಪಾಧ್ಯಾಯನಿಗೂ ಸಾಧ್ಯವಾಗದು. ಪಾಠದ ವೇಳೆಯಲ್ಲಿ ಶಿಷ್ಟಾಚಾರವನ್ನು ಅನುಸರಿಸಿದರೂ ಬಿಡುವಿನ ವೇಳೆಯಲ್ಲಿ ಆತನ ಭ್ರಷ್ಟಾಚಾರಕ್ಕೆ ಆತಂಕವಿರಲಾರದು. ಸಂಘದಂತೆ ಬುದ್ಧಿ ತಿಂಡಿಯಂತೆ ಲದ್ದಿ' ಎಂಬ ಗಾದೆಯಂತೆ ಕೆಲವು ತಂದೆ ತಾಯಿಗಳು ತನ್ನ ಮಕ್ಕಳನ್ನು ಎಚ್ಚರದಿಂದ ಸಾಕಿದ್ದರೂ ಅವು ಶಾಲೆಗೆ ಹೋಗಲು ಪ್ರಾರಂಭಿಸಿದ ನಂತರ ಅವರ ಮಾತು ಕತೆಗಳಲ್ಲಿ ವ್ಯತ್ಯಾಸ ಕಂಡು ಬರುವದು. ಇವನ್ನು ಕಂಡಾಗ ಗಾಬರಿಯಲ್ಲಿ ತಂದೆ ತಾಯಿಗಳೂ ಎಚ್ಚೆತ್ತಿಸಿ ಅವನ್ನು ಉಪಾಧ್ಯಾಯರಿಗೂ ತಿಳಿಸಿದ್ದೇ ಆದರೆ ಮಕ್ಕಳು ಎಳವುದಕ್ಕೆ ಕಾರಣವಿರಲಾರದು. ಆದರೆ ಹಲವು ತಂದೆತಾಯಿಗಳ ಶಾಲೆಯಲ್ಲಿ ಉಪಾಧ್ಯಾಯರು ವಿದ್ಯಾರ್ಥಿಯು ಅಶ್ಲೀಲಸ್ವಭಾವವನ್ನು ಖಂಡಿಸಿ ಶಿಕ್ಷಿಸಿದ್ದೇ ಆದರೆ ಮೂರನೆಯ ದಿನವೇ ಉಪಾಧ್ಯಾಯರ ಮೇಲೆ ಪುಕಾರು ಮಾಡುವರು. ಮಕ್ಕಳ ಮೇಲೆ ತಮಗಿರುವ ಅತಿಯಾದ ಪ್ರೇಮದಿಂದ ಈ ರೀತಿಯಾಗುವುದಿದೆ. ಆದರೆ ಆ ಮಮತೆಯು ಅವರನ್ನೇ ಹಾಳು ಮಾಡುವುದೆಂಬುದನ್ನು ತಂದೆತಾಯಿಗಳು ತಿಳಿಯಬೇಕು. ತನ್ನ ಮಕ್ಕಳ ಅಭಿವೃದ್ಧಿಗಾಗಿ ಉಪಾಧ್ಯಾಯರೊಡನೆ ಸಹಕರಿಸಬೇಕು. ಅದಲ್ಲದೆ ತಂದೆತಾಯಿಗಳೇ ಅವರ ಕೆಟ್ಟ ನಡೆಗಳಿಗೆ ಪ್ರೋತ್ಸಾಹ ನೀಡಿದರೆ 'ಬೇಲಿ ಹೊಲ ಮೇದಂತಾ'ಗುವುದು.

ಹಲವು ತಂದೆತಾಯಿಗಳ ಏಕಾಂತ ಸಮಯದಲ್ಲಿ ತಮ್ಮ ಬಳಿ ತಮ್ಮ ಮಕ್ಕಳಿರುವುದನ್ನು ಗಣನೆಗೆ ತಂದುಕೊಳ್ಳದೆ ವರ್ತಿಸುವುದರಿಂದ ಏನೂ ತಿಳಿಯದ ಎಳೆಯ ವೈದುಳಿನಲ್ಲಿ ಹಲವಾರು ತರಂಗಗಳು ಏಳುವುದಕ್ಕೆ ಎಡೆಯಾಗುವುದು. ಮೂರು ವರ್ಷ ಪ್ರಾಯವಾದ ನಂತರ ಮಗುವಿನ ಮೆದುಳಿನಲ್ಲಿ ಪ್ರತಿಯೊಂದು ವಿಷಯದಲ್ಲೂ ವಿಚಾರಣೆಗೆ ಪ್ರಾರಂಭವಾಗುವದು. ಇಂತಹ ಸಂದರ್ಭಗಳಲ್ಲಿ ತನ್ನ ತಂದೆತಾಯಿಗಳ ಪರಿವರ್ತನೆಯನ್ನು ಮಗುವು ತಿಳಿದರೆ ವಿಷಯಗಳ ಅಲೆಗಳಿಗೆ ಎಳೆ ಮೆದುಳು ಸಿಕ್ಕಿ ಮುಂದೆ ಅದು ಬೆಳೆದು ಯವ್ವನಕ್ಕೆ ಮೊದಲೇ ವಿಷಯಾಸಕ್ತಿಗೆ ಬಲಿಬಿದ್ದು ಜೀವನದಲ್ಲಿ ಆಷ್ಡ ದಾರಿಯನ್ನು ಹಿಡಿಯುವುದು. ಸುಪ್ತಾವಸ್ಥೆಯಲ್ಲೇ ಇದ್ದ ವಿಷಯಾಸಕ್ತಿಯು ಒಮ್ಮೆ ಹೊರಬಿದ್ದರೆ ಅದನ್ನು ಎಷ್ಟು ಮಾತ್ರಕ್ಕೂ ತಡೆಹಿಡಿಯಲಾಗದು. ಇದಕ್ಕೆ ಕಾರಣ ತಂದೆತಾಯಿಗಳಲ್ಲಿಯು ಶಿಸ್ತಿನ ಕೊರತೆ.

ನವನಾಗರಿಕತೆಗೆ ಬಲಿಬಿದ್ದ ತಂದೆತಾಯಿಗಳು ಪ್ರಾಯಕ್ಕೆ ಬಂದ ತಮ್ಮ ಹೆಣ್ಣುಮಕ್ಕಳನ್ನು ಅಪರಿಚಿತರಾದ ತಮ್ಮ ಸ್ನೇಹಿತರಿಗೂ ಸ್ನೇಹಿತರ ಗಂಡುಮಕ್ಕಳಿಗೂ ಪರಿಚಯಮಾಡಿಕೊಡುವ ರೂಢಿ ಈಗ ಸಾಮಾನ್ಯ ಅಭ್ಯಾಸವಾಗಿಬಿಟ್ಟಿದೆ. ಬಾಹ್ಯಾಡಂಭರಕ್ಕೆ ಅದೇನೊ ಯೋಗ್ಯವೆಂದೆನ್ನಬಹುದು. ಈ ನಾಗರೀಕತೆ ಪ್ರಾಯಪ್ರಬುದ್ಧರಾದ ಗಂಡು ಹೆಣ್ಣುಗಳ ಮನವನ್ನು ಆದೆಷ್ಟು ದೂರಕ್ಕೆ ಎಳೆದುಕೊಂಡು ಹೋಗುವುದೆಂಬದನ್ನು ಅದೇ ತರದ ಯೌವನವನ್ನು ದಾಟಿ ಬಂದ ತಂದೆ ತಾಯಿಗಳು ತಿಳಿದಿರಬೇಕಾದುದು ಆವಶ್ಯವಾಗಿದೆ. ಇಂತಹ ಸಂದರ್ಭಗಳನ್ನು ತಂದೆ ತಾಯಿಗಳೇ ಒಗಟಿಸಿಕೊಟ್ಟರೆ ಶರೀರದ ಆಸೆ ಆಕಾಂಕ್ಷೆಗಳಿಗೆ ಹಿಂದು ಮುಂದು ನೋಡದೆ ಧಾವಿಸುವ ಹರೆಯದ ಯುವಕ ಯುವತಿಯರಿಗೆ ಸಂಯಮವೆಂತು ಬರಬೇಕು? ಆಗ್ಗಗಣ್ಯ ಸನ್ಯಾಸಿಗಳಿಗೂ ಕೂಡ ಇಂದ್ರಿಯಾಭಿಲಾಷೆಯನ್ನು ತಡೆಹಿಡಿಯುವುದು ಕಷ್ಟಸಾಧ್ಯವೆಂದ ಮೇಲೆ ಹರೆಯದ ಯುವಕ ಯುವತಿಯರು ಒಂಟಿಡೆ ಸೇರಿದರೆ ಆದೆಷ್ಟು ಸಾಧ್ಯ? ನಾಗರೀಕತೆಯು ಈ ರೀತಿ ದುರುಪಯೋಗವಾಗದಂತೆ ತಂದೆತಾಯಿಗಳು ಗಮನಿಸಬೇಕು!

ಈಗಿನ ಚಲಚಿತ್ರಗಳಲ್ಲಿ ಹಲವು ಕಥೆಗಳೂ ತಾರೆಗಳ ಹಾವಭಾವಗಳೂ ನೃದ್ಧರ ಮನಸ್ಸಿನಲ್ಲೂ ಕಾಮೂಪೇಕ್ಷೆಯನ್ನು ಹುಟ್ಟಿಸಬಲ್ಲವು. ಇಂತಹ ಚಿತ್ರಗಳಿಗೆ ತಂದೆತಾಯಿಗಳು ತಮ್ಮ ಮಕ್ಕಳೊಂದಿಗೆ ಹೋಗಿ, ಚಿತ್ರದಲ್ಲಿ ಪ್ರಣಯಿಗಳ ನಟನೆಯನ್ನು ನೋಡಿದಾಗ ಗಂಡ ಹೆಂಡತಿಯರು ಒಬ್ಬರೊಬ್ಬರ ಮುಖನೋಡಿ ನಗುವರು. ಪ್ರಾಯದ ಮಗಳು ಉದ್ದವಾದ ನಿಟ್ಟುಸಿರನ್ನು ಬಿಟ್ಟು ಮೌಖತಿರುಗಿಸುವಳು. ಚಿಕ್ಕ ಮಕ್ಕಳು ಮನೆಯಲ್ಲಿ ಅದರಂತೆಯೇ ನಟಿಸತೊಡಗುವರು. ಈಗೀಗ ಯುವತಿಯರು ಸ್ತ್ರೀಸಹಜವಾದ ಕುಲೀನತ್ವವನ್ನು ಬಿಟ್ಟು ಹಾವಭಾವಗಳಿಂದಲೂ ಉಡುಪು ಒಯ್ಯಾರಗಳಿಂದಲೂ ಯುವಕರ ದೃಷ್ಟಿಯನ್ನು ತಮ್ಮ ಕಡೆಗೆ ಎಳೆಯಲೆಂದೇ ಹವಣಿಸುವರೆಂದರೆ ಯಾರೂ ಸಿಟ್ಟಾಗಬಾರದು. ಪ್ರೌಢೆಯೂ ಮಗಳು ರಂಗನುಂಟಪದ ಪೇಲೆ ಹತ್ತಿ ನಾಟ್ಯವಾಡಿದರೆ ತಂದೆ ತಾಯಿಗಳು 'ಕಲಾಭ್ಯಾಸ'ವೆಂದು ಹರ್ಷೋದ್ಗಾರದಿಂದ ಹೇಳುವರು. ಅವರಿಗೆ ಅವರ್ಣ ಮಿತ್ರರು ಅಭಿನಂದನೆಗಳನ್ನು ಅರ್ಪಿಸುವರು. ಹಿಡಿತವಿಲ್ಲದ ಈ ಕಲಾಭ್ಯಾಸವು ಕಾಮುಪೂಜೆಯು ಗುಡಿವುಟ್ಟುವದೆಂಬುದನ್ನು ಗಮನಿಸಬೇಕು.

ಈಗೀಗ ಯುವತಿಯರು ಅರ್ಧಮರ್ಧ ವಿದ್ಯೆ ಕಲಿತು ಚಾಕರಿ ಹುಡುಕುವುದರಿಂದ ಅವರಲ್ಲುಂಟಾಗುವ ಮುಂದಿನ ಪೀಳಿಗೆಯು ಈಗಿನದಕ್ಕಿಂತಲೂ ಹಾಳಾಗುವುದೆಂದೇ ಹೇಳಬೇಕು. ತಮ್ಮಲ್ಲೂ ಶಿಸ್ತು ಶೀಲಗಳಿಲ್ಲ; ತನ್ನ ಮಕ್ಕಳಲ್ಲೂ ಶಿಸ್ತುಶೀಲಗಳಿಗೆ ಗಮನವೀಯಲು ಸಮಯವಿಲ್ಲದಂತಾಗುವುದು. ಸಾಮಾನ್ಯವಾಗಿ ಯುವತಿಯರಿಗೆ ಗಂಡಸಿನ ಸಂಪರ್ಕ ಬೇಕಿದ್ದರೂ ಅದನ್ನು ತಂದೆ ತಾಯಿಗಳೊಡನೆ ಹೇಳದೆ ಬಚ್ಚಿಡುವುದು ಅನೈತಿಕ ವರ್ತನೆಗೆ ಮೊದಲ ಕಾರಣ. ಅದನ್ನು ತಂದೆ ತಾಯಿಗಳು ಮನಗಾಣಬೇಕು.

ಸುಖಜೀವನ ನಡೆಸಲೆಂದು ಈಗಿನ ಜನರು ಸಾಕಷ್ಟು ವಿದ್ಯೆಯಿಲ್ಲದಿದ್ದರೂ ಚಾಕರಿ ಹುಡುಕುವರು. ಕಡಮೆ ವಿದ್ಯೆ ಕಲಿತವರೆಲ್ಲಾ ಕಡೆಯ ಶಾಲೆಗಳಿಗೆ ಅಂದರೆ ಪ್ರಾಥಮಿಕ ಶಾಲೆಗಳಿಗೆ ಉಪಾಧ್ಯಾಯರಾಗಿ ನೇಮಿಸಲ್ಪಡುವರು. ಎಳೆ ಮಕ್ಕಳಿಗೆ ವಿದ್ಯೆ ಕಲಿಸುವ ಉಪಾಧ್ಯಾಯರಲ್ಲಿ ನಿಜವಾದ ವಿದ್ಯೆ, ಶಿಸ್ತು ಶೀಲಗಳಲ್ಲದಿದ್ದರೆ ಪ್ರಾಥಮಿಕ ಶಾಲೆಗಳಿಂದ ಹೊರಟು ಪ್ರೌಢ ಶಾಲೆಗಳನ್ನು ಸೇರುವ ಈ ವಿದ್ಯಾರ್ಥಿಗಳ ವಿದ್ಯಾಭ್ಯಾಸವು ಆದೆಷ್ಟು ಯೋಗ್ಯ ರೀತಿಯಿಂದಿರಬಹುದು. ಕಡಮೆ ಸಂಬಳದಲ್ಲಿ ಕೆಲಸವೂಡಿ ಸಂಸಾರ ಸಾಗಿಸುವ ಉಪಾಧ್ಯಾಯರು ತಿಂಗಳಂತ್ಯವನ್ನು ನಿರೀಕ್ಷಿಸುವರಲ್ಲದೆ ಪರರ ಮಕ್ಕಳ ಅಭಿವೃದ್ಧಿಗೆ ಗಮನವಿಡಬಹುದೆ? ಅವರಲ್ಲೂ ಅಸಭ್ಯರಿದ್ದರೆ ಮತ್ತೇ ಕೇಳಬೇಕು, ವಿದ್ಯಾರ್ಥಿಗಳೊಡನೆ ಸಮಾನತೆಯಿಂದಿರಬೇಕೆಂಬ ತತ್ವಕ್ಕನುಸಾರವಾಗಿ ಧೂಮಪಾನ ಮದ್ಯಪಾನಗಳಿಂದಲೂ, ಸಮಾನತ್ವವನ್ನು ತೋರಿಸುವ ಉಪಾಧ್ಯಾಯರೂ ಇದ್ದಾರೆ! ಈ ರೀತಿಯ ವಾತಾವರಣದಲ್ಲಿ ಇಂದಿನ ವಿದ್ಯಾರ್ಥಿಯು ಹದ್ದುಮೀರಿ ವರ್ತಿಸುತ್ತಿದ್ದರೆ ಅದು ಆತನ ತಪ್ಪೇ?

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂದರಿಯ ಬೆನಾರಿಸ್ ಮತ್ತು ಕಾಶ್ಮೀರ್ ಬಟ್ಟೆಗಳು ಸದಾ ದೊರೆಯುವವು

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ತೆಗೆಯುವವರು ಈ ಪತ್ರಿಕೆಗೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು.
ವೀರಾಜಪೇಟೆ (ಕೊಡಗು)

12–11

ಗಮನಿಸಿರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಆತ್ಯತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ.
ಯಾವ ನಮೂನೆಯ ಬಟ್ಟೆಗೂ ಅದರ್ಶವಸಿಸಿದೆ.
ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ
ಉಡುಪುಗಳನ್ನು ಹೊಲಿದು ತಯಾರಿಸಿ
ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೂ ಬ್ರದರ್ಸ್ ಎತ್ತಿದ ಕೈ!

ಪಟ್ಟೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್‌ಹಾಲಿನ ಎದುರು, ಮೈಸೂರು.

52–12

ಭದ್ರತೆ! 17 ವರ್ಷಗಳ ಸುದೀರ್ಘ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಖಜೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.
ಎಲ್ಲಾ ವಿಧದ ಆಧುನಿಕ ಬೇಂಕ್ಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.
ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ್ದ್ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000	ಮೀರಿದೆ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000	,,
ಒಟ್ಟು ನಿಧಿ. ರೂ.	8,30,00,000	,,
ಸಾ ಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000	,,

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ: ಎಂಪೈರ್ ಹೌಸ್, ಹಾರ್ನ್‌ಬಿ. ರೋಡ್, ಫೋರ್ಟ್, ಬೊಂಬೆ.

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು" ಏಜಂಟರು, ವೀರಾಜಪೇಟೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್., ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	55,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ, ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.*

or

The Branch Manager, *22-B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಿಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಿಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಿಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ, ಗೌರವ ಕಾರ್ಯದರ್ಶಿ.

52–32

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.